ಸಂಪುಟ : 8 ಸಂಚಿಕೆ : 159 ಪುಟ : 4 ಬೆಲೆ : 3.00 ಗುರುವಾರ ಜುಲೈ 27, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 159 Pages : 4 Price : 3.00 Thursday July 27, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ನಗರದಲ್ಲಿ ಇಂದು ನೀರು ಪೂರೈಕೆಯಾಗುವ ಸ್ಥಳಗಳ ಮಾಹಿತಿ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಗುರುವಾರ ನೀರು ಪೂರೈಕೆಯಾಗಲಿರುವ ಸ್ಥಳಗಳ ಮಾಹಿತಿ ಹೀಗಿದೆ.

ವಾರ್ಡ್ ನಂ.21ರ ಫಕೀರ ಅವರ ಪ್ಲಾಟ್, ಮುನವಳ್ಳಿ ಪ್ಲಾಟ್ ಕರಿಬಿಷ್ಠಿ ಅವರ ಲೈನ್, ಎಲಿಗಾರ ಪ್ಲಾಟ್, ಲಕ್ಷ್ಮೇಶ್ವರ ಲೈನ್, ಪಾಟೀಲರವರ ಲೈನ್, ಶರಣಪ್ಪನ ಲೈನ್, ನಾಗಪ್ಪನ ಕಟ್ಟಿ ಜಂತ್ಲಿ ಅವರ ಲೈನ್, ವಾರ್ಡ್ ನಂ.22ರ ಗಂಗಿಮಡಿ ಅಪಾರ್ಟ್‌ಮೆಂಟ್ ಧಾರವಾಡದವರ ಲೈನ್, ಈಶ್ವರ ಗುಡಿ ಲೈನ್, ಶುದ್ಧ ನೀರಿನ ಘಟಕ 1ರಿಂದ 5ರವರೆಗಿನ ಕ್ರಾಸ್‌ಗಳು, ವಾರ್ಡ್ ನಂ.28ರ ಪಂಚಾಕ್ಷರಿ ನಗರ 4,5,6ನೇ ಕ್ರಾಸ್ ಲೈನ್‌ಗಳು, ವಾರ್ಡ್ ನಂ.27ರ ಸಂಕಣ್ಣವರ ಲೈನ್, ಎಸ್‌ಬಿ ಆಫೀಸ್ ಲೈನ್, ಪೊಲೀಸ್ ಕ್ವಾರ್ಟರ್ಸ್, ವಾರ್ಡ್ ನಂ.29ರ ಸಾಯಿನಗರ, ಪತಂಜಲಿ ಲೈನ್, ವಾರ್ಡ್ ನಂ 8,9ರ ಹೆಲ್ತ್ ಕ್ಯಾಂಪ್ ಮಲ್ಲಯ್ಯನ ಕಟ್ಟಿ ಕಂಗೂರಿ ಅವರ ಲೈನ್, ಕಲಬುರ್ಗಿ ಅವರ ಲೈನ್, ವಾರ್ಡ್ ನಂ.10ರ ಅಶೋಕ ಲೈನ್, ಬೋರೆಗಾರ ಓಣಿ, ವಾರ್ಡ್ ನಂ.1ರ ಎಸ್ ಎಮ್ ಕೃಷ್ಣಾ ನಗರ, ವಾರ್ಡ್ ನಂ. 19,17,24,25 ಖಾನತೋಟ ಭಾಗ-2, ಬಾವಿ ಮೆಂಬರ್ ಲೈನ್, ಹಾವನೂರ ಲೈನ್, ದುರ್ಗಮ್ಮನ ಗುಡಿ ಭಾಗ-1, ಹಿಡ್ಕಿಮಠ ಭಾಗ-1,2, ಕೋಟಿಯವರ ಲೈನ್, ಮುನಿಸಿ ಪ್ರೆಸ್, ಕಾಗದಗೇರಿ ಭಟ್ಟರ ಲೈನ್, ವಾರ್ಡ್ ನಂ.35ರ 9ನಂ ಶಾಲೆ, ದೇವರಾಜ ಅರಸು ಹಾಸ್ಟೆಲ್ ಲೈನ್, ವಾರ್ಡ್ ನಂ.33ರ ರಾಧಾಕೃಷ್ಣ ನಗರ 1,2,3, ಕ್ರಾಸ್‌ಗಳು, ಪೂಜಾರ ಸರ್ ಲೈನ್‌ಗಳಲ್ಲಿ ನೀರು ಪೂರೈಕೆಯಾಗಲಿದೆ.

ತಾಂತ್ರಿಕ ಕಾರಣಗಳಿಂದ ನೀರು ಪೂರೈಕೆಯಲ್ಲಿ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸುವಂತೆ ಪ್ರಕಟಣೆಯಲ್ಲಿ ವಿನಂತಿಸಲಾಗಿದೆ.

### ಸುದ್ದಿಗೋಷ್ಠಿಯಲ್ಲಿ ಪಿಎಸ್‌ಐ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಸಚಿವ ಎಚ್ ಕೆ ಪಾಟೀಲ

# ಪ್ರಕರಣದ ವಾಸ್ತವಾಂಶ ಅರಿಯಲು ಮರುತನಿಖೆ



> ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅತೃಪ್ತ ಶಾಸಕರು ಪತ್ರ ಬರೆದಿಲ್ಲ ಎಂದು ಬಿ ಆರ್ ಪಾಟೀಲರೇ ಸ್ಪಷ್ಟನೆ ನೀಡಿದ್ದಾರಲ್ಲದೆ, ಸುಳ್ಳು ಸುದ್ದಿ ಹರಡಿದವರ ವಿರುದ್ಧ ಕ್ರಮ ಕೈಗೊಳ್ಳಲು ದೂರು ದಾಖಲಿಸುವುದಾಗಿ ತಿಳಿಸಿದ್ದಾರೆ. ಹೀಗಾಗಿ ಆ ಬಗ್ಗೆ ಯಾವುದೇ ಪ್ರತಿಕ್ರಿಯೆ ಕೊಡುವುದಿಲ್ಲ. ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ಬೆಂಗಳೂರಿಗೆ ಬಂದಿದ್ದ ರಾಹುಲ್ ಗಾಂಧಿಯವರು ಕಾರಣಾಂತರಗಳಿಂದ ಬೇಗನೆ ಅಲ್ಲಿಂದ ತೆರಳಿದರು. ಆ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ಸಭೆ ಮಾಡಲು ಸಾಧ್ಯವಾಗಲಿಲ್ಲ. ಆದಷ್ಟು ಬೇಗ ಶಾಸಕಾಂಗ ಪಕ್ಷದ ಸಭೆ ಮಾಡಬೇಕು ಎನ್ನುವುದು ಶಾಸಕರ ಒತ್ತಾಸೆ. ಗುರುವಾರ ಸಂಜೆ 6 ಗಂಟೆಗೆ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಶಾಸಕರು ತಮ್ಮ ಅಹವಾಲು ಸಲ್ಲಿಸಲಿದ್ದಾರೆ. ಮಂತ್ರಿಗಳು ಸಹ ಶಾಸಕರನ್ನು ಹೆಚ್ಚು ತಿಳಿದುಕೊಳ್ಳುವ ಕೆಲಸ ಸಭೆಯಲ್ಲಿ ನಡೆಯಲಿದೆ.
>
> – ಎಚ್ ಕೆ ಪಾಟೀಲ.
> ಸಚಿವರು.

■ ವಿಜಯಸಾಕ್ಷಿ ಸುದ್ದಿ, ಗದಗ

ಪಿಎಸ್‌ಐ ಹಗರಣದಲ್ಲಿ ದ್ವೇಷದ ಹಿನ್ನೆಲೆಯಲ್ಲಿ ಅಥವಾ ಅಧಿಕಾರಿಗಳಿಂದ ತಪ್ಪಾಗಿ ತನಿಖೆಯಾಗಿದ್ದರೆ ಪುನಃ ಅವುಗಳ ತನಿಖೆ ಮಾಡಿಸುವುದು ನಮ್ಮ ನೂತನ ಸರ್ಕಾರದ ಕರ್ತವ್ಯವಾಗಿದೆ. ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಆರೋಪಿಗಳೇ ಕಿಂಗ್‌ಪಿನ್ ಎನ್ನುವುದು ಸ್ಪಷ್ಟವಾಗಿದೆ. ಪ್ರಕರಣದ ವಾಸ್ತವಾಂಶ ಅರಿಯಲು ಮರುತನಿಖೆಗೆ ಆದೇಶಿಸಲಾಗಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಪ್ರವಾಸೋದ್ಯಮ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಚ್ ಕೆ ಪಾಟೀಲ ಹೇಳಿದರು.

ಬುಧವಾರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಿಎಸ್‌ಐ ನೇಮಕಾತಿ ಹಗರಣದ ಕಿಂಗ್‌ಪಿನ್‌ಗಳು ಯಾವ ಪಕ್ಷಕ್ಕೆ ಸೇರಿದವರು ಎನ್ನುವುದು ಜಗಜ್ಜಾಹೀರಾಗಿದೆ. ಹಗರಣದ ಕುರಿತಾಗಿ ಕಾಂಗ್ರೆಸ್ ನಾಯಕರು ಮಾಡಿದ ಆರೋಪಗಳು ನಿಜವಾಗಿವೆ. ಹೀಗಾಗಿ, ಸತ್ಯಾಂಶವನ್ನು ಅರಿಯಲು ಮರುತನಿಖೆಗೆ ಮುಂದಾಗಿದ್ದೇವೆ ಎಂದು ಹೇಳಿದರು.

ತನ್ವೀರ್ ಸೇಠ್ ಅವರು ಗೃಹ ಸಚಿವ ಜಿ. ಪರಮೇಶ್ವರ ಅವರಿಗೆ ಬರೆದ ಪತ್ರದ ಕುರಿತು ಪ್ರತಿಕ್ರಿಯಿಸಿ, ಹಿಂದಿನ ಸರಕಾರದ ಅವಧಿಯಲ್ಲಿ ಯಾವುದೇ ಪ್ರಕರಣಗಳ ತನಿಖೆ ತಪ್ಪಾಗಿದ್ದರೆ, ಅವುಗಳನ್ನು ಪುನಃ ತನಿಖೆ ನಡೆಸಬೇಕಾಗಿರುವುದು ನಮ್ಮ ಕೆಲಸ. ಆ ರೀತಿಯ ದೂರುಗಳು ಬಂದರೆ ಅವುಗಳಿಗೆ ನಮ್ಮ ಕಾಂಗ್ರೆಸ್ ಸರಕಾರ ಸೂಕ್ತವಾಗಿ ಸ್ಪಂದಿಸಲಿದೆ ಎಂದರು.

ಮಹದಾಯಿ ಯೋಜನೆಯ ಕುರಿತು ಪ್ರತಿಕ್ರಿಯೆ ನೀಡಿದ ಸಚಿವರು, ಅಭಯಾರಣ್ಯ ಹುಲಿ ಸಂರಕ್ಷಿತ ಪ್ರದೇಶ ಎಂದು ಮುಂಬೈ ಹೈಕೋರ್ಟ್ ನೀಡಿದ ತೀರ್ಪು ಇನ್ನೂ ನನ್ನ ಕೈಸೇರಿಲ್ಲ. ಮುಂಬೈ ಹೈಕೋರ್ಟ್ ತೀರ್ಪಿನಿಂದ ಮಹದಾಯಿ ಯೋಜನೆಗೆ ಯಾವುದೇ ಅಡ್ಡಿಯಾಗುವುದಿಲ್ಲ ಎಂದು ಭಾವಿಸಿದ್ದೇನೆ. ಮಹದಾಯಿ ನೀರು ಹಂಚಿಕೆ ವಿಚಾರದಲ್ಲಿ ನಮ್ಮ ಸರಕಾರ ಕಾನೂನು ಹೋರಾಟ ಮಾಡಲು ಸಿದ್ಧವಿದೆ ಎಂದು ಉತ್ತರಿಸಿದರು.

### ಪ್ರಜಾಪ್ರತಿನಿಧಿಗಳಿಗೆ ಮೊಬೈಲ್ ಆ್ಯಪ್ ತರಬೇತಿ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ ಪಾಟೀಲ

# ಅರ್ಹ ಫಲಾನುಭವಿಗಳಿಗೆ ಗೃಹಲಕ್ಷ್ಮೀ ಯೋಜನೆ ತಲುಪಲಿ



■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮೀ ಯೋಜನೆಯಡಿ ಜಿಲ್ಲೆಯ ಪ್ರತಿಯೊಬ್ಬ ಅರ್ಹ ಫಲಾನುಭವಿಯು ನೋಂದಣಿ ಮಾಡಿಕೊಳ್ಳುವದರ ಮೂಲಕ ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ದೊರಕುವಂತೆ ಮಾಡುವ ಜವಾಬ್ದಾರಿ ತಮ್ಮೆಲ್ಲರ ಮೇಲಿದೆ ಎಂದು ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ನುಡಿದರು.

ನಗರದ ಅಂಬೇಡ್ಕರ ಭವನದಲ್ಲಿ ಬುಧವಾರ ಜರುಗಿದ ಗೃಹಲಕ್ಷ್ಮೀ ಯೋಜನೆಯ ಪ್ರಜಾಪ್ರತಿನಿಧಿಗಳಿ ಮೊಬೈಲ್ ಆಪ್ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಗೃಹಲಕ್ಷ್ಮೀ ಯೋಜನೆಯಡಿ ಗದಗ ಜಿಲ್ಲೆಯು ಅರ್ಹ ಫಲಾನುಭವಿಗಳ ನೋಂದಣಿ ಕಾರ್ಯವು ಪ್ರತಿಶತ ನೂರರಷ್ಟು ಪ್ರಗತಿ ಸಾಧಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಇಂದು ಹಮ್ಮಿಕೊಳ್ಳಲಾದ ಗೃಹಲಕ್ಷ್ಮೀ ಯೋಜನೆಯ ಮೊಬೈಲ್ ಆಪ್ ಬಳಕೆ ಕುರಿತು ಕಾರ್ಯಾಗಾರದ ಸದುಪಯೋಗವನ್ನು ಪಡೆದುಕೊಂಡು ಈ ಯೋಜನೆಯಡಿ ನೋಂದಣಿ ಆಗದೇ ಇರುವ ಅರ್ಹ ಫಲಾನುಭವಿಗಳನ್ನು ಗುರುತಿಸಿ ಅವರ ಮನೆ ಬಾಗಿಲಿಗೆ ಹೋಗಿ ನೋಂದಣಿ

▸▸ 3ನೇ ಪುಟಕ್ಕೆ

# ನಾವು ನೆಮ್ಮದಿಯಿಂದ ಇರಲು ಸೈನಿಕರ ಶ್ರಮವೇ ಕಾರಣ: ಸಚಿವ ಎಚ್.ಕೆ. ಪಾಟೀಲ



■ ವಿಜಯಸಾಕ್ಷಿ ಸುದ್ದಿ, ಗದಗ

ನಾವಿಂದು ಮನೆಯಲ್ಲಿ ನೆಮ್ಮದಿಯಿಂದ ಇರಲು ದೇಶದ ಗಡಿಯಲ್ಲಿ ಹಗಲಿರುಳು ಕಾಯುತ್ತಿರುವ ಸೈನಿಕರ ಶ್ರಮವೇ ಕಾರಣವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್. ಕೆ. ಪಾಟೀಲ ಅವರು ಹೇಳಿದರು.

ನಗರದ ಕೆ.ಎಚ್ .ಪಾಟೀಲ ಸಭಾಭವನದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ವತಿಯಿಂದ 24ನೇ ಕಾರ್ಗಿಲ್ ವಿಜಯೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿ, ಚೈನಾ, ಇಂಡೋ- ಪಾಕ್ ಹಾಗೂ ಕಾರ್ಗಿಲ್ ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿ ದೇಶಕ್ಕೆ ಗೆಲುವು ತಂದುಕೊಡುವಲ್ಲಿ ಹುತಾತ್ಮರಾದ ವೀರ ಯೋಧರಿಗೆ ಶ್ರದ್ಧಾಂಜಲಿಗೆ ಕಾರಣರಾದ ಮಾಜಿ ಸೈನಿಕರ ಸಂಘಕ್ಕೆ ಸರಕಾರ ಪರವಾಗಿ ಅಭಿನಂದನೆಗಳು ಸಲ್ಲಿಸಿದ ಸಚಿವರು ಯುವಕರಲ್ಲಿ ರಾಷ್ಟ್ರಾಭಿಮಾನ ಮೂಡಿಸುವಲ್ಲಿ ಮಾಜಿ ಸೈನಿಕರ ಸಂಘವು ಯಶಸ್ವಿಯಾಗಿದೆ. ಸೈನಿಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು ಅವರಲ್ಲಿ ಉತ್ಸಾಹ ರಾಷ್ಟ್ರಪ್ರೇಮ ಕುಗ್ಗದಿರುವುದು

▸▸ 3ನೇ ಪುಟಕ್ಕೆ

# ಮದ್ಯ ಮಾರಾಟ ನಿಷೇಧ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಾದ್ಯಂತ ಮೊಹರಂ ಹಬ್ಬವನ್ನು ಜುಲೈ 25 ರಿಂದ 30 ರವರೆಗೆ ಆಚರಿಸಲಾಗುತ್ತಿದೆ. ಸದರಿ ಕಾಲಕ್ಕೆ ಶಾಂತಿ, ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜುಲೈ 28 ರ ಮಧ್ಯರಾತ್ರಿಯಿಂದ ಜುಲೈ 30ರ ಬೆಳಗಿನ 6 ಗಂಟೆಯವರೆಗೆ ಗದಗ ಜಿಲ್ಲೆಯಾದ್ಯಂತ ಮದ್ಯ ಸಾಗಾಟ ಮತ್ತು ಮದ್ಯ ಮಾರಾಟ ನಿಷೇಧಿಸಲಾಗಿದೆ. ಸದರಿ ದಿನಗಳಂದು ಗದಗ ಜಿಲ್ಲೆಯ ಯಾವತ್ತೂ ಬಾರ್‌ಗಳು, ಕ್ಲಬ್‌ಗಳು, ಬಿಯರ್, ಭಾರತೀಯ ತಯಾರಿಕೆಯ ಮದ್ಯದ ಅಂಗಡಿಗಳನ್ನು ಮೇಲ್ಕಾಣಿಸಿದ ಅವಧಿಯಲ್ಲಿ ಮುಚ್ಚತಕ್ಕದ್ದು. ಪರಿಸ್ಥಿತಿಗೆ ಅನುಗುಣವಾಗಿ ಸಾರ್ವಜನಿಕ ಶಾಂತತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ವಲಯ ಅಬಕಾರಿ ಇನ್ಸ್‌ಪೆಕ್ಟರ್ ಹಾಗೂ ಅಬಕಾರಿ ಉಪ ಆಯುಕ್ತರು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ದಂಡಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಆದೇಶಿಸಿದ್ದಾರೆ.

## ಗದಗ ಜಿಲ್ಲೆಯ ವಿವಿಧೆಡೆ ಹೊಸ ನ್ಯಾಯಬೆಲೆ ಅಂಗಡಿಗೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ರೋಣ ತಾಲೂಕಿನಲ್ಲಿ ಪರ್ಯಾಯ ವ್ಯವಸ್ಥೆಯಲ್ಲಿರುವ ಕರಮುಡಿ, ಅಮರಗೋಳ, ಬೊಮ್ಮಸಾಗರ, ಸಂದಿಗವಾಡ, ಚಿಕ್ಕಮಣ್ಣೂರು, ಕುರಡಗಿ ಗ್ರಾಮಗಳಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 22 ಕೊನೆಯ ದಿನವಾಗಿದ್ದು, ಅರ್ಜಿಯನ್ನು ರೋಣ ತಹಸೀಲ್ದಾರರ ಕಚೇರಿಯಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ರೋಣ ತಹಸೀಲ್ದಾರರ ಕಚೇರಿ, ಅಥವಾ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕರ ಕಚೇರಿ, ಜಿಲ್ಲಾಡಳಿತ ಭವನ, ಗದಗ ಇವರ ಕಾರ್ಯಾಲಯದಿಂದ ಪಡೆಯಬಹುದಾಗಿದೆ.

**ನಗರದ ಗಂಗಿಮಡಿ ಆಶ್ರಯ ಕಾಲೋನಿ:**

ಗದಗ ನಗರದ ಗಂಗಿಮಡಿ ಆಶ್ರಯ ಕಾಲೋನಿಯಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 22 ಕೊನೆಯ ದಿನವಾಗಿದ್ದು ಅರ್ಜಿಯನ್ನು ಸಹಾಯಕ ನಿರ್ದೇಶಕರು, ಆಹಾರ ನಾಗರಿಕ ಸರಬರಾಜು, ಪಡಿತರ ಪ್ರದೇಶ, ಗದಗ ಇಲ್ಲಿ ಸಲ್ಲಿಸಬಹುದಾಗಿದೆ. ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಸಹಾಯಕ ನಿರ್ದೇಶಕರು, ಪಡಿತರ ಪ್ರದೇಶ ಅಥವಾ ಉಪನಿರ್ದೇಶಕರ ಕಚೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಜಿಲ್ಲಾಡಳಿತ ಭವನ, ಗದಗ ಇವರ ಕಾರ್ಯಾಲಯದಿಂದ ಪಡೆಯಬಹುದಾಗಿದೆ.

**ಗದಗ ಶಹರ ಪ್ರದೇಶದಲ್ಲಿ:**

ಗದಗ ಪಡಿತರ ಪ್ರದೇಶ (ಶಹರ ವಲಯ)ದಲ್ಲಿ ಪರ್ಯಾಯ ವ್ಯವಸ್ಥೆಯಡಿ ಇರುವ ನಗರದ ಹಳೇ ಬಸ್‌ಸ್ಟ್ಯಾಂಡ್ ಹತ್ತಿರದ ವರ್ಧಮಾನ ಮಾರ್ಕೆಟ್ ಹತ್ತಿರದಲ್ಲಿ

▸▸ 3ನೇ ಪುಟಕ್ಕೆ

### ಕಾರ್ಗಿಲ್ ಹುತಾತ್ಮ ಯೋಧರಿಗೆ ಸಭಾಪತಿ ಹೊರಟ್ಟಿ ಗೌರವ ನಮನ

# ಭಾರತಾಂಬೆಯ ವೀರಪುತ್ರರಿಗೆ ಕೋಟಿ ನಮನ



■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಕಳೆದ 24 ವರ್ಷಗಳ ಹಿಂದೆ ಪಾಕಿಸ್ತಾನದ ವಿರುದ್ಧ 70 ದಿನಗಳ ಕಾಲ ನಡೆದ ಕಾರ್ಗಿಲ್ ಯುದ್ಧದಲ್ಲಿ ಹೋರಾಡಿ ವಿಜಯ ಸಾಧಿಸಿದ ವೀರ ಯೋಧರಿಗೆ ಶುಭ ಕೋರುವುದರೊಂದಿಗೆ 527ಕ್ಕೂ ಹೆಚ್ಚು ಯೋಧರು ಪ್ರಾಣತ್ಯಾಗಮಾಡಿ, ದೇಶಕ್ಕಾಗಿ ಜೀವ ಬಲಿಕೊಟ್ಟ ಭಾರತಾಂಬೆಯ ವೀರಪುತ್ರರಿಗೆ ಕೋಟಿ ಕೋಟಿ ನಮನಗಳು ಎಂದು ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅವರು ಬೆಂಗಳೂರಿನ ವಿಧಾನಸೌದದ ಸಭಾಂಗಣದಲ್ಲಿ ಸಿಟಿಜನ್ ಸೊಸೈಟಿ ಆಫ್ ಇಂಡಿಯಾದ ಪರಿವಾರದವರು ಏರ್ಪಡಿಸಿದ 'ಕಾರ್ಗಿಲ್ ವಿಜಯದಿವಸ್' ಕಾರ್ಯಕ್ರಮದಲ್ಲಿ ಹುತಾತ್ಮ ಯೋಧರಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು.

ತಾಯಿ ಭಾರತಿಯ ರಕ್ಷಣೆಗಾಗಿ ಶತ್ರುರಾಷ್ಟ್ರದ ವಿರುದ್ಧ ಹೋರಾಡಿ ಪ್ರಾಣತ್ಯಾಗ ಮಾಡಿದ ವೀರಯೋಧರನ್ನು ಸ್ಮರಿಸುವ ಮೂಲಕ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ದೇವರಲ್ಲಿ ಪ್ರಾರ್ಥಿಸುವ ಪವಿತ್ರ ದಿನ ಇದು. ಜಗತ್ತಿಗೆ ಭಾರತದ ಪರಾಕ್ರಮವನ್ನು ತೋರಿದ ಈ ವೀರಯೋಧರನ್ನು ಮತ್ತೆ ಮತ್ತೆ ಸ್ಮರಿಸಿ ಗೌರವಿಸೋಣ ಎಂದು ಹೇಳಿದರು.

ಈ

▸▸ 3ನೇ ಪುಟಕ್ಕೆ

# ಕಿರಿಯ ಪ್ರಾಥಮಿಕ ಶಾಲೆಗಳಿಗೆ ರಜೆ ಘೋಷಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಾದ್ಯಂತ ಸುಮಾರು 10 ದಿನಗಳಿಂದ ಸುರಿಯುತ್ತಿರುವ ಮಳೆಗೆ ಚಿಕ್ಕ ಮಕ್ಕಳು ಶಾಲೆಗೆ ಹೋಗಿ ಬರಲು ಅಡ್ಡಿಯಾಗುತ್ತಿದ್ದು, ಪೋಷಕರು ತೊಂದರೆ ಅನುಭವಿಸುತ್ತಿದ್ದಾರೆ. ಈ ಮಳೆಯಿಂದ ಚಿಕ್ಕ ಮಕ್ಕಳ ಮೇಲೆ ಆರೋಗ್ಯದ ಮೇಲೆ ಪರಿಣಾಮ ಉಂಟಾಗಬಹುದು, ಇನ್ನಿತರ ರೋಗಗಳಿಗೆ ತುತ್ತಾಗಬಹುದು.

ಮಳೆಯ ಕಾರಣದಿಂದ ವಿಪರೀತ ಚಳಿಯೂ ಇರುವುದರಿಂದ ಚಿಕ್ಕ ಮಕ್ಕಳು ಶಾಲೆಯಲ್ಲಿ ಚಳಿಯಿಂದ ನಡುಗುತ್ತ ಕೂರುವ ಪರಿಸ್ಥಿತಿ ಇದೆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಶಾಲೆಗಳಿಗೆ ರಜೆ ಘೋಷಿಸಿದ್ದಾರೆ. ಮಾನ್ಯ ಗದಗ ಜಿಲ್ಲಾಧಿಕಾರಿಗಳು ಎರಡು ದಿನ ಕಿರಿಯ ಪ್ರಾಥಮಿಕ ಶಾಲೆಗಳಿಗೆ ರಜೆ ಘೋಷಿಸಬೇಕೆಂದು ಜಯ ಕರ್ನಾಟಕ ಜನಪರ ವೇದಿಕೆ ರಾಜ್ಯ ಉಪಾಧ್ಯಕ್ಷ ಹಾಲಪ್ಪ ವರವಿಯವರು ಪತ್ರಿಕಾ ಪ್ರಕಟಣೆಯ ಮೂಲಕ ಗದಗ ಜಿಲ್ಲಾಧಿಕಾರಿಗಳಲ್ಲಿ ವಿನಂತಿಸಿದ್ದಾರೆ.



### ಹವಾಮಾನ, ಮಳೆ-ಬೆಳೆ- ಜಿಲ್ಲಾಧಿಕಾರಿಗಳ ಜತೆ ಸಿಎಂ ವಿಡಿಯೋ ಸಂವಾದದಲ್ಲಿ ಸಿಎಂ ಸೂಚನೆ

# ಸೇತುವೆಗಳ ಮುಳುಗಡೆ ಶಾಶ್ವತ, ಪರ್ಯಾಯ ಮಾರ್ಗ ನಿರ್ಮಾಣ ಸಾಧ್ಯತೆ ಪರಿಶೀಲಿಸಿ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಗಳಲ್ಲಿ ಪ್ರತಿವರ್ಷ ಮಳೆಗಾಲದಲ್ಲಿ ಕೆಳಹಂತದ ಸೇತುವೆಗಳು ಮುಳುಗಡೆಯಾಗುತ್ತವೆ. ಆದ್ದರಿಂದ ಜನರಿಗೆ ಅನುಕೂಲವಾಗುವಂತೆ ಶಾಶ್ವತ ಪರ್ಯಾಯ ಮಾರ್ಗ ನಿರ್ಮಾಣದ ಸಾಧ್ಯತೆಗಳನ್ನು ಪರಿಶೀಲಿಸಿ ವರದಿ ಕಳಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ರಾಜ್ಯದ ಹವಾಮಾನ ಮತ್ತು ಮಳೆ-ಬೆಳೆಗಳಿಗೆ ಸಂಬಂಧಿಸಿದಂತೆ ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಬುಧವಾರ ನಡೆದ ವಿಡಿಯೋ ಸಂವಾದದಲ್ಲಿ ಅವರು ಮಾತನಾಡಿದರು.

ಪ್ರತಿವರ್ಷ ಕೆಳಹಂತದ ಸೇತುವೆಗಳು ಮುಳುಗಡೆ ಯಾಗುವುದರಿಂದ ಶಾಶ್ವತ ಪರ್ಯಾಯ ಮಾರ್ಗ ನಿರ್ಮಿಸುವುದು ಸೂಕ್ತವಾಗಿದೆ. ಆದ್ದರಿಂದ ಈ ಕುರಿತು ಪರಿಶೀಲಿಸಿ ವಿಸ್ತೃತವಾದ ವರದಿ ಕಳಿಸಬೇಕು. ಇದನ್ನು ಸರಕಾರದ ಹಂತದಲ್ಲಿ ಪರಿಶೀಲಿಸಲಾಗುವುದು ಎಂದರು.

ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಭೀಮಾ ಸೇರಿದಂತೆ ಪ್ರಮುಖ ನದಿಗಳ ವ್ಯಾಪ್ತಿಯಲ್ಲಿ ಹೆಚ್ಚಿನ ನಿಗಾವಹಿಸಬೇಕು. ಯಾವುದೇ ರೀತಿಯ ತೊಂದರೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದರು.



ಅತಿವೃಷ್ಟಿ ಮತ್ತು ಪ್ರವಾಹ ಸಂದರ್ಭಗಳಲ್ಲಿ ಮಾನವ ಜೀವಹಾನಿ ತಡೆಗಟ್ಟಲು ರಾಜ್ಯದ ಎಲ್ಲ ಜಿಲ್ಲೆಗಳ ಅಧಿಕಾರಿಗಳು ತಕ್ಷಣವೇ ಎಲ್ಲ ರೀತಿಯ ಮುಂಜಾಗ್ರತೆ

▸▸ 3ನೇ ಪುಟಕ್ಕೆ

## ಸಾಕ್ಷಿ ಸುಭಾಷಿತ

**ನಾಲಿಗೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವುದೇ ಮೊದಲ ಸದ್ಗುಣ**
**–ಥಾಸರ್**

## ಸಂಪಾದಕೀಯ

# ಭಾವೈಕ್ಯತೆಯ ಭಾವ ಮತ್ತಷ್ಟು ಬೆಳೆಯಲಿ

ದೇಶದಲ್ಲಿ ಹಿಂದೂ– ಮುಸ್ಲಿಂ ಮಧ್ಯೆ ದ್ವೇಷ ಭಾವನೆ ಹೆಚ್ಚಾಗುತ್ತಿದೆ. ಆಕಸ್ಮಿಕವಾಗಿ ದ್ವೇಷ ಬೆಳೆಯುವುದಕ್ಕಿಂತ ರಾಜಕೀಯ ಲಾಭಕ್ಕಾಗಿ ದ್ವೇಷ ಸೃಷ್ಟಿಸುವ ಕಾರ್ಯ ವ್ಯವಸ್ಥಿತ ಮತ್ತು ಸಂಘಟಿತವಾಗಿ ನಡೆಯುತ್ತಿದೆ. ಧಾರ್ಮಿಕ ಭಾವನೆಯನ್ನು ಕೆರಳಿಸಿ, ಅಧಿಕಾರದ ಗದ್ದುಗೆ ಏರುವ ಕನಸು ಕಾಣುತ್ತಿದ್ದಾರೆ. ಕೆಲವೊಮ್ಮೆ ಆ ಕನಸುಗಳು ನನಸಾಗಿದ್ದು ಇದೆ. ಆದರೂ ಗ್ರಾಮೀಣ ಭಾಗದಲ್ಲಿ ಹಿಂದೂ–ಮುಸ್ಲಿಂ ನಾವೆಲ್ಲಾ ಒಂದು ಎನ್ನುವ ಭಾವೈಕ್ಯತೆಯ ಭಾವ ವ್ಯಕ್ತವಾಗುತ್ತಿದೆ. ಆ ಭಾವ ಇನ್ನಷ್ಟು ಮತ್ತಷ್ಟು ವೃದ್ಧಿಯಾಗಬೇಕಾಗಿರುವುದು ಇಂದಿನ ಅಗತ್ಯ ಮತ್ತು ಅನಿವಾರ್ಯತೆಯಾಗಿದೆ.

ಕೊಪ್ಪಳ ಜಿಲ್ಲೆ ಸದ್ಯ ಭಾವೈಕ್ಯತೆಯ ಭಾವನೆಯನ್ನು ಬೆಳೆಸುವ ತಾಣವಾಗಿ ಬದಲಾಗುತ್ತಿದೆ. ಹನುಮಂತ ಹುಟ್ಟಿದ ನಾಡಿನಲ್ಲಿ ರಾಮ–ರಹಿಮರು ಸಹಬಾಳ್ವೆಯ ಅನೇಕ ಕಥೆಗಳಿವೆ. ಈಗ ಕಣ್ಮುಂದೆಯೇ ಕಾಣಬಹುದಾಗಿದೆ. ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ನಿರ್ಮಾಣಗೊಂಡ ಮಸೀದಿಯನ್ನು ಯಲಬುರ್ಗಾದ ಶ್ರೀಧರ ಮುರುಡಿಮಠದ ಬಸವಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ಕುಕನೂರಿನ ಅನ್ನದಾನೇಶ್ವರ ಶಾಖಾಮಠದ ಮಹದೇವಯ್ಯ ಸ್ವಾಮೀಜಿ ಉದ್ಘಾಟಿಸಿ ಭಾವೈಕ್ಯತೆಗೆ ಹೊಸ ಭಾಷ್ಯ ಬರೆದಿದ್ದಾರೆ. ಈ ಹಿಂದೆ ಕೊಪ್ಪಳ ಗವಿಮಠದ ಗವಿಸಿದ್ದೇಶ್ವರ ಶ್ರೀಗಳು ಸಹ ಕುಕನೂರು ತಾಲೂಕಿನ ಭಾನಾಪುರ ಗ್ರಾಮದಲ್ಲಿನ ಮಸೀದಿ ಉದ್ಘಾಟಿಸಿ ಭಾವೈಕ್ಯತೆ ಮೆರೆದಿದ್ದಾರೆ. ಆ ಪರಂಪರೆಯನ್ನು ಕೊಪ್ಪಳ ನಾಡಿನ ಮಠಾಧೀಶರು ಮುನ್ನಡೆಸಿದ್ದಾರೆ. ಭಾವೈಕ್ಯತೆಯ ಕೊಂಡಿಯನ್ನು ಮತ್ತಷ್ಟು ಗಟ್ಟಿ ಮಾಡಿದ್ದಾರೆ. ಮಸೀದಿ ಉದ್ಘಾಟನೆ ಕಾರ್ಯಕ್ರಮಕ್ಕೆ ಹಿಂದೂ–ಮುಸ್ಲಿಂ ಸಮಾಜದ ಮುಖಂಡರು ಸಾಕ್ಷಿಯಾಗಿದ್ದಾರೆ. ಪರಸ್ಪರ ತಮ್ಮ ತಮ್ಮ ಧರ್ಮಾಚರಣೆಯನ್ನು ಗೌರವಿಸಿಕೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ. ಜಾತಿ–ಧರ್ಮದ ನಡುವಿನ ಸಂಘರ್ಷಕ್ಕಿಂತ ಮಾನವೀಯತೆ ಮುಖ್ಯ, ಶಾಂತಿಯಿಂದ ಬದುಕುವುದು ಮುಖ್ಯ ಎನ್ನುವ ಸಂದೇಶ ರವಾನಿಸಿದ್ದಾರೆ. ಕೋಮು ಭಾವನೆ ಕೆರಳಿಸುವ ವ್ಯಕ್ತಿಗಳ ಮಾತು ಸಮಾಜಕ್ಕೆ ಎಷ್ಟು ಅಪಾಯಕಾರಿಯೋ ಅದರ ಜೊತೆಗೆ ಭಾವೈಕ್ಯತೆ ಬಗ್ಗೆಯೂ ಗಂಟೆಗಟ್ಟಲೆ ಭಾಷಣ ಮಾಡುವ ಢೋಂಗಿ ಜಾತ್ಯಾತೀತವಾದಿಗಳು ಅಷ್ಟೆ ಅಪಾಯಕಾರಿ. ಇವರಿಬ್ಬರ ಮಧ್ಯೆ ಭಾವೈಕ್ಯತೆ ಮೂಡಿಸುವ ಶುದ್ಧ ಕಾಯಕ ಮಾಡುತ್ತಿರುವ ಮಠಾಧೀಶರು, ಮಸೀದಿ ಆಡಳಿತ ಮಂಡಳಿ ಸದಸ್ಯರು ಮತ್ತು ಜನಸಾಮಾನ್ಯರು ಅತ್ಯಂತ ಶ್ರೇಷ್ಠರಾಗಿ ಕಾಣುತ್ತಾರೆ.

ಭಾವೈಕ್ಯತೆ ಬಗ್ಗೆ ಮಾತಿಗಿಂತ ಕೃತಿ ಮೇಲೂ ಎನ್ನುವುದನ್ನು ಕೊಪ್ಪಳ ಜಿಲ್ಲೆಯ ಮಠಾಧೀಶರು ಸಾಬೀತು ಮಾಡಿದ್ದಾರೆ. ಕೊಪ್ಪಳ ಗವಿಮಠದ ಶ್ರೀಗಳು ಅದಕ್ಕೆ ಮುನ್ನುಡಿ ಬರೆದಿದ್ದಾರೆ. ಇನ್ನಿತರ ಕೆಲ ಮಠಾಧೀಶರು ಅದೇ ಹಾದಿಯಲ್ಲಿ ಸಾಗುತ್ತಿದ್ದಾರೆ. ಧರ್ಮವನ್ನು ಸರಿಯಾಗಿ ಅರ್ಥೈಸಿಕೊಂಡು ಎಲ್ಲರನ್ನು ಒಳಗೊಳ್ಳಬೇಕು ಎನ್ನುವ ಭಾವನೆಯಿಂದ ಮಸೀದಿ ಉದ್ಘಾಟನೆಗೆ ಶ್ರೀಗಳನ್ನು ಆಹ್ವಾನಿಸುತ್ತಿರುವ ಮುಸ್ಲಿಂ ಸಮುದಾಯದ ಮುಖಂಡರು ಮತ್ತು ಬಂದ ಆಹ್ವಾನವನ್ನು ಸ್ವೀಕರಿಸಿ ಗೌರವಿಸಿದ ಮಠಾಧೀಶರ ನಡೆ–ನುಡಿ ಅನುಕರಣೀಯ ಮತ್ತು ಅಭಿನಂದನಾರ್ಹ. ಭಾವೈಕ್ಯತೆಯ ಈ ಭಾವ ಮತ್ತಷ್ಟು ವೃದ್ಧಿಯಾಗಲಿ.

## ಕವನ

### ನಿಮ್ಮ ಊರಿಗೆ ಸರ್ಕಾರದ ಬಸ್‌ನಲ್ಲಿ ಉಚಿತ ಪಯಣ

ನಿಮ್ಮ ಊರಿಗೆ ಸರ್ಕಾರದ ಬಸ್‌ನಲ್ಲಿ ಉಚಿತ ಪಯಣ
ಸರ್ಕಾರದ ಯೋಜನೆಯ ಜೊತೆ ಇರಲಿ ಸುರಕ್ಷಿತ ಪಯಣ
ಮಹಿಳೆಯರಿಗೆ ನೀಡಿದೆ ಶಕ್ತಿ ಎಂಬ ಈ ಸಂದೇಶದ ಕಿರೀಟ
ಬಸ್ ಹತ್ತುವಾಗ ಆಗದಿರಲಿ ಈ ಹೊಡೆದಾಟ ಬಡಿದಾಟ

ಕರ್ನಾಟಕ ರಾಜ್ಯ ಸರ್ಕಾರದಿಂದ ಮಹಿಳೆಯರಿಗೆ ಹಬ್ಬದ ಖುಷಿ
ಬಂಧು–ಬಳಗದವರ ಮುಖದಲ್ಲಿ ಮೂಡಿತು ನಗುವಿನ ಖುಷಿ
ಬಸ್‌ನಲ್ಲಿ ಸಂಚರಿಸುವಾಗ ಬೇಕಿದೆ ಈ ಒಂದು ಆಧಾರ್ ಕಾರ್ಡ್
ಹಗಲು ರಾತ್ರಿ ಎನ್ನದೆ ಊರು ಸುತ್ತಲು ಬೇಕು ಆಧಾರ್ ಕಾರ್ಡ್

ಪ್ರತಿ ತಿಂಗಳು ಎರಡು ಸಾವಿರ ರೂಪಾಯಿ ಮೊತ್ತವು ಉಚಿತ
ಆಹಾರ ಧಾನ್ಯಗಳ ಜೊತೆಗೆ ನೂರಕ್ಕೂ ಹೆಚ್ಚು ಮೊತ್ತವು ಖಚಿತ
ಹೀಗಾದರೆ ಕೆಲಸ ಮಾಡುವ ಪ್ರತಿಯೊಂದು ಕೈಗೆ ಬೇಕಿಲ್ಲ ಹೊರೆ
ಒಟ್ಟಿನಲ್ಲಿ ಎಲ್ಲೆಡೆಯೂ ಈ ಒಂದು ಯೋಜನೆ ಮಾಡಿದ್ದು ಖರೆ

ಸದಾ ದುಡಿತವೆ ನನ್ನ ದೇವರು ಎಂದು ನಂಬಿದವರ ಗತಿಯೇನು
ಸಣ್ಣ ಪುಟ್ಟ ಅಲ್ಲಿ ಇಲ್ಲಿ ಕೂಲಿ ನಾಲಿ ಮಾಡುವರ ಬದುಕೇನು
ಈಗ ಎಲ್ಲವೂ ಉಚಿತವಾದರೆ ಕಾಯಕ ಜೀವಿಗಳ ಹಿತವೇನು
ಅಲ್ಲಿ ಆ ದೇವರು ಇಲ್ಲಿ ಈ ದೇವರು ಎಂದು ಪ್ರಾರ್ಥಿಸಿದರೇನು.

ಪ್ರತಿದಿನವೂ ಆಟೋ ಚಾಲಕರ ಗೋಳು ಕೇಳೋರಿಲ್ಲ ಯಾರು
ಮನೆಗೆ ದುಡಿಯದೆ ಹೋದರೆ ಹೆಂಡತಿ ಮಕ್ಕಳ ಕಣ್ಣಲ್ಲಿ ನೀರು
ಧೈರ್ಯದಿಂದ ಮನೆಯ ಜವಾಬ್ದಾರಿ ಪರಿಸ್ಥಿತಿಯನ್ನು ಎದುರಿಸಿ
ಯಾವುದಕ್ಕೂ ಜಗ್ಗದೆ ಬಗ್ಗದೆ ನಡೆಸಬೇಕು ಈ ಜೀವನ ಸಾಗಿಸಿ

ಬಡವರ ಬದುಕಿನ ಬೆಳಕಿನಲ್ಲಿ ಕಣ್ಣೀರ ಒರೆಸುವರು ಯಾರು
ನೊಂದು–ಬೆಂದು ಕುಗ್ಗಿದ ಜೀವಕ್ಕೆ ಸ್ವಾಂತನ ಹೇಳುವರು ಯಾರು
ಈಗ ಹೊಲ ಗದ್ದೆಗಳಲ್ಲಿ ಮೈ ಬಗ್ಗಿಸಿ ದುಡಿಯುವವರು ಯಾರು
ಬರೀ ಉಚಿತ ಖಚಿತವಾದರೆ ಇದರಲ್ಲಿ ನಡೆಯುವರು ಯಾರು.

**– ಸಿ ಆರ್.ಗಡಾದ,** ಗದಗ.

# ಕಾರ್ಗಿಲ್ ವಿಜಯೋತ್ಸವ: ಒಂದು ಅವಲೋಕನ



ಭಾರತ ಮತ್ತು ಪಾಕಿಸ್ತಾನದ ನಡುವಿನ ಅಂತರಾಷ್ಟ್ರೀಯ ಸಂಬಂಧಗಳಲ್ಲಿ ಪಾಕಿಸ್ತಾನವು ಭಾರತದ ಮೇಲೆ ಹಲವು ಯುದ್ಧಗಳನ್ನು ಸಾರಿದೆ ಅದರ ಮೆಲಕುಗಳನ್ನು ನೆನೆಯುತ್ತ ಅದರಲ್ಲಿ ಪ್ರಮುಕವಾಗಿರುವ ಕಾರ್ಗಿಲ್ ಯುದ್ಧದ ಘಟನಾವಳಿಗಳನ್ನು ಪ್ರಸ್ತಾಪಿಸುತ್ತಾ ಭಾರತೀಯ ಸೈನ್ಯದ ಶಕ್ತಿ ಮತ್ತು ಶ್ರೇಷ್ಠತೆ ಯನ್ನು ನೆನೆಯುವ ಪ್ರಯತ್ನ ವಾಗಿದೆ ಈ ಹಿನ್ನೆಲೆಯೆಲ್ಲಿ ಪ್ರಥಮವಾಗಿ ಪಾಕ್ ಪ್ರಾರಂಬಿಸಿದ ಯುದ್ದ ಅದುವೆ

"1947 ರ ಇಂಡೋ–ಪಾಕ್ ಯುದ್ಧ ಭಾರತ ಪಾಕ್ ವಿಭಜನೆಯ ನಂತರ ಕಾಶ್ಮೀರಕ್ಕಾಗಿ ನಡೆದ ಮೊದಲ ಯುದ್ಧವಿದು. ಅಂದಿನ ಜಮ್ಮು ಮತ್ತು ಕಾಶ್ಮೀರದ ಮಹಾರಾಜಾ ಹರಿ ಸಿಂಗ್ ಭಾರತಕ್ಕೆ ಬೆಂಬಲ ನೀಡುತ್ತಾರೆ ಎಂದು ಪಾಕ್ ಬೆದರಿತ್ತು.

ಪಾಕಿಸ್ತಾನದ ಮಿಲಿಟರ್ ಬೆಂಬಲದಿಂದ ಗುಡ್ಡಗಾಡು ಪಂಗಡ ದಾಳಿ ನಡೆಸಿ ಕಾಶ್ಮೀರದ ಒಂದು ಭಾಗವನ್ನು ಆಕ್ರಮಿಸಿಕೊಂಡಿತು. ಆಗ ವಿಧಿಯಿಲ್ಲದೆ ಮಹಾರಾಜಾ ಒಪ್ಪಂದಕ್ಕೆ ಸಹಿ ಹಾಕಲೇಬೇಕಾಯಿತು. 1948ರ ಏಪ್ರಿಲ್ 22ರಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಗಡಿ ನಿಯಂತ್ರಣಾ ರೇಖೆಯನ್ನು ನಿಗದಿಪಡಿಸಿತು.

ಭಾರತದ ಕಾಶ್ಮೀರದ ಎರಡನೇ ಮೂರರಷ್ಟು ಆಕ್ರಮಿಸಿಕೊಂಡಿದ್ದರೆ, ಪಾಕಿಸ್ತಾನ ಮೂರರಲ್ಲಿ ಒಂದು ಭಾಗವನ್ನು ಆಕ್ರಮಿಸಿಕೊಂಡಿದೆ.1965ರ ಭಾರತ–ಪಾಕಿಸ್ತಾನ ಯುದ್ಧ ಜಮ್ಮು ಮತ್ತು ಕಾಶ್ಮೀರದೊಳಗೆ ಉಗ್ರರನ್ನು ನುಸುಳಿಸಲು ಪಾಕಿಸ್ತಾನ ಆರಂಭಿಸಿದ 'ಆಪರೇಷನ್ ಜಿಬ್ರಾಲ್ಟರ್' ಪರಿಣಾಮವಾಗಿ ಭಾರತ ಪೂರ್ಣಪ್ರಮಾಣದ ಯುದ್ಧವನ್ನು ಸಾರಬೇಕಾಯಿತು. ಲಾಲ್ ಬಹಾದ್ದೂರ್ ಶಾಸ್ತ್ರಿಯವರು ಪ್ರಧಾನಿಯಾಗಿದ್ದಾಗ ಸತತ 17 ದಿನಗಳ ಕಾಲ ಎರಡೂ ಸೇನೆಗಳು ನಡುವೆ ತುರುಸಿನ ಯುದ್ಧ ನಡೆಯಿತು, ಸಾವಿರಾರು ಯೋಧರು ಪ್ರಾಣ ಕಳೆದುಕೊಂಡರು. ಎರಡನೇ ವಿಶ್ವ ಯುದ್ಧದ ನಂತರ ಅತೀ ಹೆಚ್ಚು ಯುದ್ಧ ವಾಹನ, ಟ್ಯಾಂಕ್ ಗಳನ್ನು ಬಳಸಿದ್ದು ಇದೇ ಯುದ್ಧದಲ್ಲಿ. ಸೋವಿಯತ್ ರಷ್ಯಾ ಮತ್ತು ಅಮೆರಿಕ ಮಧ್ಯ ಪ್ರವೇಶಿಸಿ, ತಾಷ್ಕೆಂಟ್ ಒಪ್ಪಂದವಾದ ನಂತರ ಕದನವಿರಾಮ ಘೋಷಿಸಲಾಯಿತು. ಈ ಯುದ್ಧದಲ್ಲಿ ಎರಡೂ ರಾಷ್ಟ್ರಗಳು ತಾವೇ ಗೆದ್ದೆವೆಂದು ಸಂಭ್ರಮಿಸಿದವು.

ಬಾಂಗ್ಲಾದೇಶಕ್ಕಾಗಿ ನಡೆದ 1971ರ ಯುದ್ಧ ಈ ಯುದ್ಧ ಕಾಶ್ಮೀರಕ್ಕಾಗಿ ನಡೆಯದಿದ್ದುದು ವಿಶೇಷ. ಆದರೆ, ಅಂದಿನ ಈಸ್ಟ್ ಪಾಕಿಸ್ತಾನ ಮತ್ತು ವೆಸ್ಟ್ ಪಾಕಿಸ್ತಾನದ ರಾಜಕೀಯ ನಾಯಕರ ನಡುವೆ ಉದ್ಭವಿಸಿದ್ದ ಸಂಘರ್ಷದಿಂದ ಯುದ್ಧ ನಡೆಯಬೇಕಾಯಿತು. ಬಾಂಗ್ಲಾದೇಶ ಸ್ವತಂತ್ರವಾದ ನಂತರ ಪಾಕಿಗಳ ಕಿರುಕುಳ ತಾಳಲಾರದೆ ಹಲವಾರು ಬಾಂಗ್ಲಾದೇಶಿಯರು ಭಾರತದಲ್ಲಿ ಆಶ್ರಯ ಪಡೆದರು.

ಬಾಂಗ್ಲಾದೇಶವನ್ನು ಸ್ವತಂತ್ರ ಮಾಡುವಲ್ಲಿ ಭಾರತವೂ ಮಧ್ಯಸ್ಥಿಕೆ ವಹಿಸಿತ್ತು. ಇದನ್ನು ವಿರೋಧಿಸಿ ಪಾಕ್ ಭಾರತದ ಮೇಲೆ ದಾಳಿ ಮಾಡಿದ್ದರಿಂದ ಯುದ್ಧ ಆರಂಭವಾಯಿತು. ಪಾಕಿಸ್ತಾನದಲ್ಲಿರುವ ಕಾಶ್ಮೀರ, ಪಂಜಾಬ್ ಮತ್ತು ಸಿಂಧ್ ಪ್ರಾಂತ್ಯವನ್ನು ಭಾರತ ಕಬಳಿಸಿತ್ತು. ಎರಡು ವಾರ ನಡೆದ ಈ ಯುದ್ಧದಲ್ಲಿ 90 ಸಾವಿರಕ್ಕೂ ಹೆಚ್ಚು ಯೋಧರು, ನಾಗರಿಕರು ಶರಣಾಗತರಾದರು. ಪಾಕಿಸ್ತಾನ ತನ್ನ ಅರ್ಧದಷ್ಟು ನೌಕಾದಳ, ಕಾಲು ಭಾಗದಷ್ಟು ವಾಯುಸೇನೆ, ಮತ್ತು ಮೂರನೇ ಒಂದರಷ್ಟು ಭೂಸೇನೆಯನ್ನು ಕಳೆದುಕೊಂಡಿತು.

ನಂತರದಲ್ಲಿ ಭಾರತ ಮತ್ತು ಪಾಕ್ ನ ಪ್ರಮುಖ ಯುದ್ಧ ಅದುವೆ ಕಾರ್ಗಿಲ್ ಯುದ್ಧವಾಗಿದೆ ಈ ಯುದ್ಧವು ಜುಲೈ 26, 1999 ರಂದು ಕಾರ್ಗಿಲ್‌ನಲ್ಲಿ ಪಾಕಿಸ್ತಾನದೊಂದಿಗಿನ ಯುದ್ಧದಲ್ಲಿ ಭಾರತವು ಗೆದ್ದಿತು. ಆ ವರ್ಷದಿಂದ, ಇಂದು ಕಾರ್ಗಿಲ್ ಅನ್ನು ವಿಜಯ್ ದಿವಸ್ ಎಂದು ಕರೆಯಲಾಗುತ್ತದೆ. ಈ ಯುದ್ಧದ ಸಮಯದಲ್ಲಿ, ಭಾರತೀಯ ಕೆಚ್ಚೆದೆಯ ಸೈನ್ಯವು ತುಂಬಾ ಕಠಿಣವಾಗಿ ಹೋರಾಡಿತು ಮತ್ತು ಕೆಟ್ಟ ಹವಾಮಾನದ ಪರಿಸ್ಥಿತಿಗಳಲ್ಲಿಯೂ ಭಯಪಡದೆ ಶತ್ರುಗಳನ್ನು ವಶಪಡಿಸಿಕೊಂಡಿತು.ಈ ಯುದ್ಧವು ಭಾರತೀಯರಲ್ಲಿ ತಮ್ಮ ತ್ಯಾಗಮಯ ಸೈನ್ಯದ ಶಕ್ತಿಯನ್ನು ಸ್ಮರಿಸಿ ನಮ್ಮ ಈ ಕಾರ್ಗಿಲ್ ಯುದ್ಧವು ನಮ್ಮ ದೇಶವು ಬಹಳ ಕಷ್ಟಕರವಾದ ಸಮಯವಾಗಿತ್ತು.

ಇದಲ್ಲದೆ, ಇದು ಪ್ರತಿ ಭಾರತೀಯರಲ್ಲಿ ರಾಷ್ಟ್ರೀಯತೆ , ದೇಶಭಕ್ತಿ ಮತ್ತು ಏಕತೆಯ ಭಾವನೆಯನ್ನು ಉಂಟುಮಾಡಿದ ಬಿಕ್ಕಟ್ಟಿನ ಪರಿಸ್ಥಿತಿಯಾಗಿದೆ.

1999ರ ಕಾರ್ಗಿಲ್ ಯುದ್ಧ ಗಡಿ ನಿಯಂತ್ರಣಾ ರೇಖೆಯನ್ನು ದಾಳಿ ಭಾರತದಲ್ಲಿನ ಕಾರ್ಗಿಲ್ ಜಿಲ್ಲೆಯಲ್ಲಿ ಪಾಕಿಸ್ತಾನ ಯೋಧರು ನುಸುಳಿದ್ದರು. ಇದಕ್ಕೆ ಪ್ರತಿಯಾಗಿ ಪಾಕಿಸ್ತಾನದ ಮೇಲೆ ಭಾರತ ಭಾರೀ ಪ್ರಮಾಣದಲ್ಲಿ ಯುದ್ಧ ಸಾರಿತು. ಎರಡು ತಿಂಗಳು ಭೀಕರ ಕದನ ನಡೆದು, ಶೇ.80ರಷ್ಟು ಪ್ರದೇಶವನ್ನು ಭಾರತ ತನ್ನ ಸುಪರ್ದಿಗೆ ತೆಗೆದು–ಕೊಂಡ ನಂತರ, ಪಾಕ್ ಸೇನೆಯಲ್ಲಿ ಭುಗಿಲೆದ್ದ ಆಂತರಿಕ ಭಿನ್ನಮತ, ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿದು ಪಾಕಿಸ್ತಾನ ತನ್ನ ಸೇನೆಯನ್ನು ಹಿಂತೆಗೆದುಕೊಳ್ಳಲಾಯಿತು. ಪಾಕಿಸ್ತಾನದ ಆರ್ಥಿಕ ಸ್ಥಿತಿ ತೀರಾ ಕುಸಿದುಹೋಗಿತ್ತು. ಸತ್ತ ಪಾಕಿಸ್ತಾನದ ಯೋಧರ ಹೆಣವನ್ನು ಸ್ವೀಕರಿಸಲು ಪಾಕ್ ನಿರಾಕರಿಸಿತು. ಕೊನೆಗೂ 1999ರ ಜುಲೈ 26ರಂದು ಭಾರತ ಜಯಶಾಲಿ ಎಂದು ಘೋಷಿಸಲಾಯಿತು. ಅಂದಿನ ಪಾಕ್ ಪ್ರಧಾನಿ ನವಾಜ್ ಷರೀಫ್ ಸೋಲನ್ನು ಒಪ್ಪಿಕೊಂಡರು.

ಕಾರ್ಗಿಲ್ ಯುದ್ಧವು ಭಾರತದ ಇತಿಹಾಸದಲ್ಲಿ ಮರೆಯಲಾಗದ ಘಟನೆಯಾಗಿದೆ. ಅದೇನೇ ಇದ್ದರೂ, ಇದು ಹಿಂದೆಂದಿಗಿಂತಲೂ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ದೇಶಭಕ್ತಿಯ ಭಾವನೆಗಳನ್ನು ತಂದ ಘಟನೆಯಾಗಿದೆ . ಭಾರತೀಯ ಸೈನಿಕರ ಕೆಚ್ಚೆದೆಯ ಹೋರಾಟವು ಈ ದೇಶದ ಎಲ್ಲಾ ನಾಗರಿಕರಿಗೆ ಸ್ಪೂರ್ತಿಯಾಗಿ ಮುಂದುವರಿಯುತ್ತದೆ

ಕಾರ್ಗಿಲ್ ಯುದ್ಧ ಸ್ಮಾರಕ, ಭಾರತಭಾರತದ ದ್ರಾಸ್‌ನಲ್ಲಿರುವ ಭಾರತೀಯ ಸೇನೆಯಿಂದ ಕಾರ್ಗಿಲ್ ಯುದ್ಧ ಸ್ಮಾರಕದ ಮುಖ್ಯ ದ್ವಾರಸ್ಮಾರಕದಲ್ಲಿ ಭಾರತದ ದೈತ್ಯ ಧ್ವಜಕಾರ್ಗಿಲ್ ಯುದ್ಧ ಸ್ಮಾರಕ ಕಾರ್ಗಿಲ್ ಯುದ್ಧದ ವೇಳೆ ಪಾಕ್ ಸೆಂಟ್ರಿ ಪೋಸ್ಟ್ ಅನ್ನು ಭಾರತೀಯ ಸೇನೆ ವಶಪಡಿಸಿಕೊಂಡಿದೆ ಕಾರ್ಗಿಲ್ ಯುದ್ಧ ಸ್ಮಾರಕವನ್ನು ಭಾರತೀಯ ಸೇನೆಯು ನಿರ್ಮಿಸಿದೆ, ಇದು ಟೋಲೋಲಿಂಗ್ ಬೆಟ್ಟದ ತಪ್ಪಲಿನಲ್ಲಿರುವ ಡ್ರಾಸ್‌ನಲ್ಲಿದೆ. ನಗರ ಕೇಂದ್ರದಿಂದ ಟೈಗರ್ ಹಿಲ್‌ನಾದ್ಯಂತ ಸುಮಾರು 5 ಕಿಮೀ ದೂರದಲ್ಲಿರುವ ಸ್ಮಾರಕವು ಕಾರ್ಗಿಲ್ ಯುದ್ಧದ ಹುತಾತ್ಮರನ್ನು ಸ್ಮರಿಸುತ್ತದೆ.



**–ಡಾ.ಗವಿಸಿದ್ದಪ್ಪ ಮುತ್ತಾಳ,**
ಪ್ರಾಂಶುಪಾಲರು,
ಸರಕಾರಿ ಪ್ರಥಮ ದರ್ಜೆ ಕಾಲೇಜು, ಅಳವಂಡಿ.

# ರೋಟರಿ ಕ್ಲಬ್ ವತಿಯಿಂದ ದಂತ ತಪಾಸಣಾ ಶಿಬಿರ




**■ವಿಜಯಸಾಕ್ಷಿ ಸುದ್ದಿ, ಗದಗ**

ರೋಟರಿ ಕ್ಲಬ್ ಗದಗ–ಬೆಟಗೇರಿ ವತಿಯಿಂದ ಲೂಕಿನ ಅಂತೂರು ಬೆಂತೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ದಂತ ತಪಾಸಣೆ ಶಿಬಿರ ಏರ್ಪಡಿಸಲಾಗಿತ್ತು.

ಅಧ್ಯಕ್ಷತೆಯನ್ನು ಎಸ್‌ಡಿಎಮ್‌ಸಿ ಅಧ್ಯಕ್ಷ ಬಸವರಾಜ ಮಣಕವಾಡ ವಹಿಸಿದ್ದರು. ವಿದ್ಯಾರ್ಥಿಗಳಿಗೆ ಹಲ್ಲಿನ ಸಾಮಾನ್ಯ ಕಾಯಿಲೆಗಳ ಬಗ್ಗೆ ಮಾಹಿತಿ ನೀಡಿ, ದಂತಕ್ಷಯ, ವಸಡು ರೋಗಗಳ ಬಗ್ಗೆ ತಿಳಿಸಲಾಯಿತು. ಹಲ್ಲಿನ ಕ್ಷಯಕ್ಕೆ ಕಾರಣವಾಗುವ ಆಹಾರ ಪದ್ಧತಿ ಮತ್ತು ಆಹಾರದ ಆಯ್ಕೆಗಳ ಬಗ್ಗೆ ಶಾಲೆಯ ಮಕ್ಕಳಿಗೆ ಅರಿವು ಮೂಡಿಸಲಾಯಿತು.

ರೊ.ಡಾ. ಆರ್ ಕೆ ಗಚ್ಚಿನ್ಮಠ, ಬಾಯಲ್ಲಿರುವ ಬ್ಯಾಕ್ಟೀರಿಯಾ ಸಕ್ಕರೆಯೊಂದಿಗೆ ಸಂಪರ್ಕಕ್ಕೆ ಬಂದಾಗ ಹಾನಿಕಾರಕ ಆಸಿಡ್ ಉತ್ಪತ್ತಿ ಮಾಡುವ ಬಗ್ಗೆ ತಿಳಿಸಿ, ಈ ಬ್ಯಾಕ್ಟೀರಿಯಾ ಬಾಯಿಯಲ್ಲಿ ಅಂತಿಮವಾಗಿ ಹಲ್ಲಿನ ಕೊಳೆಯುವಿಕೆಗೆ ಕಾರಣವಾಗುತ್ತದೆ ಎಂದರು.

ಇನ್ನೊಬ್ಬ ದಂತ ಶಸ್ತ್ರಚಿಕಿತ್ಸಕ ರೊ.ಡಾ. ಆರ್ ಬಿ ಉಪ್ಪಿನ್ ಶಿಬಿರವನ್ನುದ್ದೇಶಿಸಿ ಮಾತನಾಡಿ, ತಂಪು ಪಾನೀಯಗಳು, ಮಿಠಾಯಿಗಳು, ಕುಕೀಸ್, ಪೇಸ್ಟ್ರಿಗಳಲ್ಲಿ ಸಕ್ಕರೆ ಹೆಚ್ಚಾಗಿ ಬಳಕೆಯಾಗುತ್ತದೆ. ಆಹಾರದ ಲೇಬಲ್‌ಗಳನ್ನು ಓದಿ, ಕಡಿಮೆ ಸಕ್ಕರೆಯನ್ನು ಹೊಂದಿರುವ ಸರಿಯಾದ ಆಹಾರ ಮತ್ತು ಪಾನೀಯಗಳನ್ನು ಆರಿಸಬೇಕು ಎಂದರು. ಕ್ಲಬ್‌ನ ಅಧ್ಯಕ್ಷ ಆರ್. ಚಂದ್ರಮೌಳಿ ಕೆ ಜಾಲಿ ಅವರು ಸಾಮಾನ್ಯ ಹಲ್ಲಿನ ಕಾಯಿಲೆಗಳು ಮತ್ತು ಅವುಗಳನ್ನು ತಡೆಗಟ್ಟಲು ಬಳಸುವ ಕ್ರಮಗಳ ಕುರಿತು ಮಾತನಾಡಿದರು.

ಶಿಬಿರದಲ್ಲಿ ಗ್ರಾ ಪಂ ಸದಸ್ಯರಾದ ಪ್ರಕಾಶಗೌಡ್ರ ಪಾಟೀಲ, ಮಂಜುನಾಥ ಪವಾಡಿ, ರೋಟರಿ ಸಂಸ್ಥೆಯ ಸದಸ್ಯರಾದ ಎಸ್ ಎಸ್ ಶಿವಾಚಾರ್ಯ, ಅಕ್ಷಯ ಶೆಟ್ಟಿ, ಶಿಕ್ಷಕರಾದ ದ್ಯಾನಣ್ಣ ಮಳ್ಳೂರ, ಗೋವಿಂದರೆಡ್ಡಿ ಬಿರಸರಿ, ಶಿವಾನಂದ ಮಣಕವಾಡ, ಶ್ರೀಮತಿ ಮೋಟಗಿ, ಸೌಭಾಗ್ಯ, ಎಸ್ ವ್ಹಿ ಅಂಗಡಿ, ಶರಣಯ್ಯ ದೊಡ್ಡಯ್ಯಪ್ಪನವರ, ಶಿವಾನಂದ ಚಿಂಚಲಿ ಉಪಸ್ಥಿತರಿದ್ದರು. ಪ್ರಧಾನ ಶಿಕ್ಷಕ ಪಿ ಎಸ್ ಗಿಡ್ಡಣ್ಣವರ ಸರ್ವರನ್ನು ಸ್ವಾಗತಿಸಿದರು.

### ರಾಜ್ಯಮಟ್ಟದ ಮಾಧ್ಯಮ ಹಬ್ಬದಲ್ಲಿ ಅಳವಂಡಿ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

# ಸುದ್ದಿ ಬರವಣಿಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ



**■ವಿಜಯಸಾಕ್ಷಿ ಸುದ್ದಿ, ಕೊಪ್ಪಳ**

ತುಮಕೂರು ವಿಶ್ವವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಮಾಧ್ಯಮ ಹಬ್ಬ–2023ರ ವಿವಿಧ ಸ್ಪರ್ಧೆಯಲ್ಲಿ ತಾಲೂಕಿನ ಅಳವಂಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ.

ಬಿ.ಎ.4ನೇ ಸೆಮೆಸ್ಟರ್‌ನ ಅಣ್ಣಯ್ಯ ಹಿರೇಮಠ ರಾಜ್ಯಮಟ್ಟದ ಸುದ್ದಿ ಬರವಣಿಗೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಪಾರಿತೋಷಕ, ಪ್ರಮಾಣ ಪತ್ರ ಹಾಗೂ ನಗದು ಹಣ ಗಳಿಸಿದ್ದಾರೆ. ಬಿ.ಎ.4ನೇ ಸೆಮೆಸ್ಟರ್‌ನ ಚಂದ್ರಕಾಂತ ದೇಶಪಾಂಡೆ ಹಾಗೂ ಬಿ.ಎ.6ನೇ ಸೆಮೆಸ್ಟರ್‌ನ ಗುಡದಪ್ಪ ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು, ಪಾರಿತೋಷಕ, ಪ್ರಮಾಣಪತ್ರ ಹಾಗೂ ನಗದು ಹಣ ಗಳಿಸಿದ್ದಾರೆ.

ಬಿ.ಎ.6ನೇ ಸೆಮೆಸ್ಟರ್‌ನ ವಿದ್ಯಾರ್ಥಿನಿಯರಾದ ಇಂದಿರಾ. ಬಿ., ಪಿಟಿಸಿ ಸ್ಪರ್ಧೆ, ಅನಿತಾ ಆರ್.ಜೆ. ಸ್ಪರ್ಧೆ, ಮಲ್ಲಮ್ಮ ನುಡಿಚಿತ್ರ ಸ್ಪರ್ಧೆ, ಶಿವಮ್ಮ ನ್ಯೂಸ್ ಪ್ರೆಸೆಂಟೇಷನ್ ಸ್ಪರ್ಧೆ ಹಾಗೂ ರೇಣುಕಾ ಕಿರುಚಿತ್ರ ಸ್ಪರ್ಧೆಯಲ್ಲಿ ಭಾಗವಹಿಸಿ ಮೆಚ್ಚುಗೆಯ ಪ್ರಮಾಣಪತ್ರ ಪಡೆದಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಪ್ರಾಚಾರ್ಯ ಡಾ.ಗವಿಸಿದ್ದಪ್ಪ ಮುತ್ತಾಳ, ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರಾದ ಬಸವರಾಜ ಕರುಗಲ್, ವಿಜಯಕುಮಾರ್ ಕುಲಕರ್ಣಿ, ಸಹಾಯಕ ಪ್ರಾಧ್ಯಾಪಕರಾದ ಮಲ್ಲಿಕಾರ್ಜುನ ಬ್ಯಾಲಹುಣಸಿ, ನಾಗೇಂದ್ರಪ್ಪ.ಬಿ., ಇಮಾಮ್ ಸಾಬ್, ವಿವಿಧ ವಿಭಾಗಗಳ ಉಪನ್ಯಾಸಕರಾದ ಪ್ರದೀಪ್ ಪಲ್ಲೇದ್, ಈಶಪ್ಪ ಮೇಟಿ, ರವಿ ಹಿರೇಮಠ, ಸಿದ್ದು ಕಡ್ಲೆಕೊಪ್ಪ, ವೀರಭದ್ರಪ್ಪ, ವೆಂಕಟೇಶ ನಾಯಕ, ಹಸೀನಾ ಭಾನು, ಮಹೇಶ್, ದೈಹಿಕ ಶಿಕ್ಷಣ ನಿರ್ದೇಶಕ ಸಿದ್ದಾಚಾರಿ, ಗ್ರಂಥಪಾಲಕಿ ಗೌತಮಿ, ಬೋಧಕೇತರ ಸಿಬ್ಬಂದಿ ವೀರಣ್ಣ ಪೂಜಾರ, ಹನುಮಕ್ಕ, ದುರ್ಗಪ್ಪ ಹಾಗೂ ಕಾಲೇಜಿನ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.

# ಮನೋರಮಾ ಕಾಲೇಜಿನ ವಿದ್ಯಾರ್ಥಿ ಸಂಸತ್ ರಚನೆ



**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಮನೋರಮಾ ಸ್ವತಂತ್ರ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಂಸತ್ ರಚನೆ ಮಾಡಲಾಯಿತು. ವಿದ್ಯಾರ್ಥಿಗಳು ಮತದಾನ ಮಾಡುವುದರ ಮೂಲಕ ವಿದ್ಯಾರ್ಥಿ ಪ್ರತಿನಿಧಿಗಳನ್ನು ಆಯ್ಕೆ ಮಾಡಿದರು.

ಪ್ರಾಚಾರ್ಯ ಬಿ ಎಸ್ ಹಿರೇಮಠ ಮತದಾನ ಪ್ರಕ್ರಿಯೆಗೆ ಚಾಲನೆ ನೀಡಿ, ವಿದ್ಯಾರ್ಥಿಗಳು ನಾಯಕತ್ವದ ಗುಣಗಳನ್ನು ವಿದ್ಯಾರ್ಥಿ ದೆಸೆಯಿಂದಲೇ ರೂಢಿಸಿಕೊಂಡರೆ ವ್ಯಕ್ತಿತ್ವ ವಿಕಸನಗೊಳ್ಳುವುದು ಎಂದರು.

ವಿದ್ಯಾರ್ಥಿಗಳ ಪ್ರತಿನಿಧಿಯಾಗಿ ಕೋಮಲ್ ಬಾಂಡಗೆ, ಜಂಟಿ ಕಾರ್ಯದರ್ಶಿಯಾಗಿ ಪ್ರಗತಿ ಕಾಟಿಗಾರ, ಸಾಂಸ್ಕೃತಿಕ ಪ್ರತಿನಿಧಿಯಾಗಿ ಸ್ಫೂರ್ತಿ ಬಗಾಡೆ, ಕ್ರೀಡಾ ಪ್ರತಿನಿಧಿಯಾಗಿ ರಿಯಾ ಬಾಂಡಗೆ, ಪ್ರವಾಸೋದ್ಯಮ ಪ್ರತಿನಿಧಿಯಾಗಿ ಸಚಿನ್ ಕೆ ಆಯ್ಕೆಯಾದರು.

ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಚೇರಮನ್ ಎನ್ ಎಮ್ ಕುಡತರಕರ, ಆಡಳಿತಾಧಿಕಾರಿ ಕಿಶೋರ್ ಮುದಗಲ್ಲ, ಸಂಸ್ಥೆಯ ನಿರ್ದೇಶಕರಾದ ಮಂಜುನಾಥ ಕುಡತರಕರ, ಸಂಜಯಕುಮಾರ ಕುಡತರಕರ, ಚೇತನ ಕುಡತರಕರ, ಪಿಯುಸಿ ಸಹ ಸಂಯೋಜಕ ಪ್ರೊ. ರಾಘವೇಂದ್ರ ನವಲಗುಂದ ಹಾಗೂ ಸಿಬ್ಬಂದಿ ವರ್ಗದವರು ಶುಭ ಹಾರೈಸಿದರು.

# ಸದನದ ಕಲಾಪವನ್ನು ಸುಗಮವಾಗಿ ನಡೆಸಿದ ಸಭಾಪತಿ ಹೊರಟ್ಟಿ



**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಮನೆಯ ಹಿರಿಯನಿಗೆ ಒಂದು ಮನೆಯನ್ನು ನಡೆಸುವುದೇ ಕಷ್ಟವಾಗುತ್ತದೆ. ಅದು ಸರಾಗವಾಗಿ ನಡೆಯಬೇಕೆಂದರೆ ಮನೆಯಲ್ಲಿನ ಎಲ್ಲರೂ ಸಹಕಾರ ನೀಡಿ ಹಿರಿಯನೊಂದಿಗೆ ಕೈ ಜೋಡಿಸಿದರೆ ಮಾತ್ರ ಕೆಲಸ ಸುಲಭವಾಗುತ್ತದೆ. ಮನೆಯ ಪರಿಸ್ಥಿತಿಯೇ ಹೀಗಾದರೆ, ಸದನದ ಕಲಾಪಗಳನ್ನು ನಡೆಸುವುದು ಸುಲಭವಲ್ಲ. ಏಕೆಂದರೆ ಅಲ್ಲಿ ವಿವಿಧ ಸಂಸ್ಕೃತಿಯ, ವಿವಿಧ ಸ್ಥಳಗಳ, ವಿವಿಧ ವಿಚಾರಗಳ ಸದಸ್ಯರು ಇರುತ್ತಾರೆ. ಅವರೆಲ್ಲರನ್ನೂ ಒಟ್ಟುಗೂಡಿಸಿಕೊಂಡು ಹೋಗುವದು ಸಭಾಧ್ಯಕ್ಷ ಅಥವಾ ಸಭಾಪತಿಗೆ ದೊಡ್ಡ ಸವಾಲು.

ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿಯವರು ಅಂತಹ ಜಾಣ್ಮೆ, ದಕ್ಷತೆ ಹೊಂದಿದವರು. ತಮ್ಮ ಜೀವನದ ಅರ್ಧ ಆಯುಷ್ಯವನ್ನು ವಿಧಾನ ಸಭೆಯಲ್ಲಿಯೆ ಕಳೆದಿದ್ದಾರೆ. ಈಗ ಅವರೇ ಸಭಾಪತಿಯಾಗಿರುವುದರಿಂದ ಸದನದ ಕಲಾಪಗಳನ್ನು ನಡೆಸುವುದು ಅವರಿಗೆ ನೀರು ಕುಡಿದಷ್ಟೇ ಸುಲಭ!

ಜುಲೈ ತಿಂಗಳಿನಲ್ಲಿ ನಡೆದ 16ನೇ ವಿಧಾನ ಪರಿಷತ್ ಕಲಾಪವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ ಶ್ರೇಯಸ್ಸು ಸಭಾಪತಿ ಬಸವರಾಜ ಹೊರಟ್ಟಿಯವರಿಗೆ ಸಲ್ಲುತ್ತದೆ. ಅವರು ಸದಸನವನ್ನು ಅತ್ಯಂತ ಸಮರ್ಥವಾಗಿ ನಡೆಸಿ ಎಲ್ಲರ ಪ್ರೀತಿ ಗಳಿಸಿದ್ದಾರೆ. ವಿಧಾನಪರಿಷತ್ತಿನ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆ–ಗದುಕೊಂಡು ವಿಧಾನಸಭೆಯ ಕಲಾಪಗಳನ್ನು ಸುಸೂತ್ರವಾಗಿ ನಡೆಸಿದ್ದು ಅವರ ಕಾರ್ಯದಕ್ಷತೆಗೆ ಹಿಡಿದ ಕನ್ನಡಿಯಾಗಿದೆ.

ಹೊಸ ಸರಕಾರದ ಮೊದಲ ಮುಂಗಾರು ಮತ್ತು ಬಜೆಟ್ ಅಧಿವೇಶನ ಆಗಿತ್ತು. ಏನೆಲ್ಲ ಸಂಕಷ್ಟಗಳು ಬರಬಹುದು ಎನ್ನುವ ನಿರೀಕ್ಷೆ ಇದ್ದರೂ ಸಹ ಯಾವ ತೊಂದರೆಯೂ ಆಗದಂತೆ ಸಭಾಪತಿ ಹೊರಟ್ಟಿ ಸದನವನ್ನು ನಡೆಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಸಭಾಪತಿ ಕಚೇರಿಗೆ ಆಗಮಿಸಿ ಸದನದ ಕಲಾಪವನ್ನು ಅತ್ಯಂತ ಸಮರ್ಥವಾಗಿ ನೆರವೇರಿಸಿದ್ದಕ್ಕೆ ಹೊರಟ್ಟಿಯವರನ್ನು ಅಭಿನಂದಿಸಿದ್ದಾರೆ. ಅಲ್ಲದೆ, ಎಲ್ಲ ಕಾರ್ಯಗಳಿಗೆ ತುಂಬು ಸಹಕಾರ ನೀಡಿದ ಎಲ್ಲ ಸದಸ್ಯರನ್ನು, ಮುಖ್ಯಮಂತ್ರಿಗಳನ್ನು, ಅಧಿಕಾರಿಗಳನ್ನು ಸಭಾಪತಿ ಹೊರಟ್ಟಿಯವರು ಅಭಿನಂದಿಸಿದ್ದಾರೆ.

# ಮಳೆಯಿಂದ ಮನೆ ಹಾನಿಗೊಳಗಾದವರಿಗೆ ಪರಿಹಾರ ನೀಡಿ









**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯಾದ್ಯಂತ ಸುರಿಯುತ್ತಿರುವ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಬಿಟ್ಟೂ ಬಿಡದೆ ಸುರಿಯುತ್ತಿರುವ ಮಳೆಗೆ ದುರ್ಬಲಗೊಂಡ ಮನೆಗಳು ಕುಸಿದು ಬೀಳುತ್ತಿವೆ.

ಮುಂಗಾರು ಆರಂಭದಲ್ಲಿ ಮಳೆ ಇಲ್ಲದೆ ಕಂಗಾಲಾಗಿದ್ದ ರೈತರು, ಇದೀಗ ಮಳೆ ಸ್ವಲ್ಪ ನಿಂತರೆ ಸಾಕು ಬಿತ್ತನೆ ಕಾರ್ಯ ಮಾಡಬಹುದಿತ್ತು ಎಂದು ದೇವರಲ್ಲಿ ಪ್ರಾರ್ಥಿಸುವಂತಾಗಿದೆ. ಎಲ್ಲೆಡೆ ಭೂಮಿಯಲ್ಲಿ ಬೆಳೆಗಿಂತ ಕಳೆಯೇ ಹೆಚ್ಚಾಗಿದ್ದು ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿ ಈರುಳ್ಳಿ, ಮೆಣಸಿನಕಾಯಿ ಬಿತ್ತನೆ ಕಾರ್ಯಕ್ಕೆ ತೊಂದರೆಯಾಗಿ ರೈತರು ಚಡಪಡಿಸುವಂತಾಗಿದೆ.

ತಾಲೂಕಿನ ತಿಮ್ಮಾಪುರ ಗ್ರಾಮದಲ್ಲಿ ನಿರಂತರ ಮಳೆಗೆ ಬಹುತೇಕ ಮನೆಗಳು ಸೋರತೊಡಗಿದ್ದು, ಅವುಗಳ ಪೈಕಿ 5 ಮನೆಗಳ ಗೋಡೆ ಹಾಗೂ ಮೇಲ್ಛಾವಣಿಗಳು ನೆಲಕಚ್ಚಿವೆ. ಅದೃಷ್ಟವಶಾತ್ ಮನೆಯಲ್ಲಿದ್ದ ಜನರು ಪ್ರಾಣಾಪಾಯದಿಂದ ಬಚಾವಾಗಿದ್ದಾರೆ. ಇಷ್ಟೇ ಅಲ್ಲದೆ, ಗ್ರಾಮ ಪಂಚಾಯಿತಿಯ ನಿರ್ಲಕ್ಷ್ಯದಿಂದ ಗ್ರಾಮದ ರಸ್ತೆಗಳು ಸಂಪೂರ್ಣ ಹದಗೆಟ್ಟು ಕೆಸರುಗದ್ದೆಯಂತಾಗಿವೆ.

ಸಂಬಂಧಿಸಿದ ಅಧಿಕಾರಿಗಳು ಮನೆ ಹಾನಿಗೊಳಗಾದವರಿಗೆ ಶೀಘ್ರವಾಗಿ ಪರಿಹಾರ ನೀಡಬೇಕೆಂದು ಹಸಿರು ಸೇನೆಯ ವಿ ಆರ್ ನಾರಾಯಣರೆಡ್ಡಿ ಬಣದ ಗದಗ ಜಿಲ್ಲಾ ರೈತ ಸಂಘದ ಅಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ ಆಗ್ರಹಿಸಿದ್ದಾರೆ.

### 100 ರೂ.ಗಾಗಿ ಮಗನನ್ನೇ ಕೊಂದ ಕುಡುಕ ತಂದೆ

**■ವಿಜಯಸಾಕ್ಷಿ ಸುದ್ದಿ, ಸಮಸ್ತಿಪುರ**

ಬಿಹಾರದ ಸಮಸ್ತಿಪುರ ಜಿಲ್ಲೆಯಿಂದ ಆಘಾತಕಾರಿ ಸುದ್ದಿಯೊಂದು ಹೊರಬಂದಿದೆ. ಕುಡಿದ ಅಮಲಿನಲ್ಲಿ ತಂದೆಯೊಬ್ಬ ತನ್ನ ಅಮಾಯಕ ಮಗನನ್ನೇ ಕತ್ತು ಸೀಳಿ ಕೊಂದಿದ್ದಾನೆ. ಕೃತ್ಯ ಎಸಗಿದ ಬಳಿಕ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ. ಮೊಹಿಯುದ್ದೀನ್‌ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಭಾದಯ್ಯ ಗ್ರಾಮದಲ್ಲಿ ಈ ಘಟನೆ ನಡೆದಿದೆ.

ಘಟನೆಗೆ ಸಂಬಂಧಿಸಿದಂತೆ ಭದಯ್ಯ ಗ್ರಾಮದಲ್ಲಿ ತಂದೆ ತನ್ನ ಮೂರು ವರ್ಷದ ಅಮಾಯಕ ಮಗನ ಕುತ್ತಿಗೆಗೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿದ್ದಾನೆ.

## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ಭಾರತಾಂಬೆಯ ವೀರಪುತ್ರರಿಗೆ ಕೋಟಿ ನಮನ

ಮೊದಲನೇ ಪುಟದಿಂದ

> ದೇಶಕ್ಕಾಗಿ ಪ್ರಾಣತೆತ್ತ ವೀರಯೋಧರಿಗೆ ಎಷ್ಟು ನಮನ, ಗೌರವ ಸಲ್ಲಿಸಿದರೂ ಕಡಿಮೆಯೇ. ಅವರ ಜೀವಕ್ಕೆ ಬೆಲೆಕಟ್ಟಲು ಅಸಾಧ್ಯ. ದೇಶದ ಗೌರವವನ್ನು ಎತ್ತಿ ಹಿಡಿಯುವುದರ ಜೊತೆಗೆ ಬಲಾಢ್ಯ ದೇಶ ಎಂಬ ಹೆಗ್ಗಳಿಕೆಗೆ ಕಾರಣೀಕರ್ತರಾದವರು ಈ ಯೋಧರು. ಈ ಎಲ್ಲ ಕುಟುಂಬಗಳ ನೋವು-ನಲಿವಿನ ಜೊತೆಗೆ ದೇಶವೇ ಆಸರೆಯಾಗಿ ನಿಲ್ಲಬೇಕಿದೆ. ಕಾರ್ಗಿಲ್ ಯುದ್ಧದಲ್ಲಿ ನಮ್ಮ ವೀರಯೋಧರು ಶತ್ರು ರಾಷ್ಟ್ರದ ವಿರುದ್ಧ ವಿಜಯ ಸಾಧಿಸಿದ ಇಂದಿನ ದಿನ ಅವಿಸ್ಮರಣೀಯವಾದದ್ದು.
>
> **– ಬಸವರಾಜ ಹೊರಟ್ಟಿ.**

ಸಂಧರ್ಭದಲ್ಲಿ ಸಿಟಿಜನ್ ಸೊಸೈಟಿ ಆಫ್ ಇಂಡಿಯಾದ ಪರಿವಾರದ ಸದಸ್ಯರು, ವೀರ ಯೋಧರು, ಭಾರತೀಯ ಸೇನೆಯ ಪ್ರಮುಖ ಆಡಳಿತವರ್ಗ, ಸಭಾಪತಿಯವರ ಆಪ್ತ ಕಾರ್ಯದರ್ಶಿ ಎಚ್ ಡಿ ಪಾಟೀಲ, ವಿಶೇಷಾಧಿಕಾರಿ ಶೈಲಾ ಕೆ ಡಿ, ಕರ್ತವ್ಯಾಧಿಕಾರಿ ಡಾ.ಮಹೇಶ ವಾಳ್ವೇಕರ್ ಸೇರಿದಂತೆ ಭಾರತೀಯ ಸೇನೆಯ ಅಭಿಮಾನಿಗಳು ಭಾಗವಹಿಸಿದ್ದರೆಂದು ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

# ಅರ್ಹ ಫಲಾನುಭವಿಗಳಿಗೆ ಗೃಹಲಕ್ಷ್ಮೀ ಯೋಜನೆ ತಲುಪಲಿ

ಮೊದಲನೇ ಪುಟದಿಂದ

ಕಾರ್ಯ ಮಾಡುವದರ ಮೂಲಕ ಯೋಜನೆ ಅನುಷ್ಠಾನದಲ್ಲಿ ಜಿಲ್ಲೆಯನ್ನು ಮಾದರಿಯನ್ನಾಗಿಸಲು ಕರೆ ನೀಡಿದರು.

ಬಡ ಜನರು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸ್ವಾವಲಂಬಿಯನ್ನಾಗಿಸುವ ಮಹತ್ವಾಕಾಂಕ್ಷೆಯೊಂದಿಗೆ ಮನೆ ಯಜಮಾನಿಗೆ ಪ್ರತಿ ಮಾಹೆ ಎರಡು ಸಾವಿರ ರೂ. ಒದಗಿಸುವ ಯೋಜನೆ ಗೃಹಲಕ್ಷ್ಮೀಯಾಗಿದೆ. ಈ ಯೋಜನೆಯಡಿ ಜಿಲ್ಲೆಯ ಪ್ರತಿಯೊಬ್ಬ ಅರ್ಹ ಫಲಾನುಭವಿಗಳ ನೋಂದಣಿ ಕಾರ್ಯದಲ್ಲಿ ಯಾವುದೇ ಫಲಾಪೇಕ್ಷಗಳನ್ನು ಬಯಸದೇ ಪ್ರಾಮಾಣಿಕವಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಂತೆ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು. ಕಾರ್ಯಕ್ರಮದಲ್ಲಿ ನಗರಸಭೆ ಸದಸ್ಯರು, ಜಿಲ್ಲಾಧಿಕಾರಿ ವೈಶಾಲಿ. ಎಂ.ಎಲ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

# ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

**ವಿಜಯಸಾಕ್ಷಿ ಸುದ್ದಿ, ಗದಗ**

2023-24ನೇ ಸಾಲಿನಲ್ಲಿ ಗದಗ ಜಿಲ್ಲೆಯ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ವಸತಿ ನಿಲಯಗಳಾದ ಎಸ್.ಎಮ್. ಕೃಷ್ಣ ಬಾಲಕರ ವಸತಿ ನಿಲಯ, ಕಳಸಾಪುರ ರೋಡನಲ್ಲಿನ ಬಾಲಕಿಯರ ವಸತಿ ನಿಲಯ, ರೋಣ ತಾಲೂಕಿನ ಬದಾಮಿ ರೋಡನಲ್ಲಿರುವ ಬಾಲಕರ ವಸತಿ ನಿಲಯ, ಮುಂಡರಗಿ ತಾಲೂಕಿನ ಕೊಪ್ಪಳ ರೋಡನಲ್ಲಿನ ಬಾಲಕಿಯರ ವಸತಿ ನಿಲಯ, ಲಕ್ಷ್ಮೇಶ್ವರ ತಾಲೂಕಿನ ಬಾಳಿಗೇರಿ ಓಣಿಯಲ್ಲಿನ ಬಾಲಕರ ವಸತಿ ನಿಲಯಗಳಲ್ಲಿ ಪಿ.ಯು.ಸಿ. ನಂತರದ ಕೋರ್ಸುಗಳಿಗೆ ಪ್ರವೇಶಾತಿಗಾಗಿ ಸ್ಟೇಟ್ ಹಾಸ್ಟೆಲ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಪೋಷಕರು/ವಿದ್ಯಾರ್ಥಿಗಳು ವೆಬ್‌ಸೈಟ್ ವಿಳಾಸ https://shp.karnataka.gov.in ಮೂಲಕ ಆಗಸ್ಟ್ 16 ರೊಳಗಾಗಿ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಿ ಅರ್ಜಿ ಪ್ರತಿ ಹಾಗೂ ಎಲ್ಲಾ ದಾಖಲೆಗಳನ್ನು ಸಂಬಂಧಿಸಿದ ವಸತಿ ನಿಲಯಗಳಿಗೆ ಸಲ್ಲಿಸಬಹುದಾಗಿದೆ.

ವಿದ್ಯಾರ್ಥಿಗಳು ಸರ್ಕಾರಿ ಅಥವಾ ಅಂಗೀಕೃತ ಕಾಲೇಜುಗಳಲ್ಲಿ ಮೆಟ್ರಿಕ್ ನಂತರದ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರಬೇಕು. ವಸತಿ ನಿಲಯಗಳಲ್ಲಿ 75% ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು 25% ಇತರೆ ವರ್ಗದವರಿಗೆ ಮೀಸಲಿಡಲಾಗಿದೆ. ಅಲ್ಪಸಂಖ್ಯಾತರ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 2.50 ಲಕ್ಷ ರೂ. ಗಳಿಗಿಂತ ಮೀರಿರಬಾರದು. ಹಿಂದುಳಿದ ವರ್ಗಗಳಾದ 2ಎ, 2ಬಿ, 3ಎ, 3ಬಿ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 2.50 ಲಕ್ಷ ರೂ.ಗಳಿಗಿಂತ ಮೀರಿರಬಾರದು.

ಪ್ರವರ್ಗ-1 ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 1.00 ಲಕ್ಷ ರೂ. ಗಳಿಗಿಂತ ಮೀರಿರಬಾರದು, ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನವು 2.50 ಲಕ್ಷ ರೂ.ಗಳಿಗಿಂತ ಮೀರಿರಬಾರದು. ಅರ್ಜಿಯೊಂದಿಗೆ ತಹಸೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ ಕಾರ್ಡ್, ಅಂಕಪಟ್ಟಿ ಹಾಗೂ ವಿದ್ಯಾರ್ಥಿ ಪಾಸ್ ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ಮತ್ತು ನಿಗದಿ ಪಡಿಸಿದ ದಿನಾಂಕದೊಳಗಾಗಿ ಅರ್ಜಿಯನ್ನು ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ, ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಹಾಗೂ ಹತ್ತಿರದ ವಸತಿ ನಿಲಯಗಳಿಗೆ ಭೇಟಿ ನೀಡಿ ಸಂಪರ್ಕಿಸಬಹುದಾಗಿದೆ.

## ಗ್ರಾಮ ಒನ್, ಕರ್ನಾಟಕ ಒನ್ ಕೇಂದ್ರಗಳೆದುರು 'ಗೃಹಲಕ್ಷ್ಮೀ'ಯರ ಸರತಿ ಸಾಲು

# 'ಇವತ್ತು ಸರ್ವರ್ ಇಲ್ರೀ...!'



> ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ್ದೇನೆ. ಗ್ರಾಮ ಒನ್ ಕೇಂದ್ರದವರು ಅರ್ಜಿ ಸಲ್ಲಿಸಲು ಯಾವುದೇ ಹಣ ಪಡೆಯುವಂತಿಲ್ಲ. ಈ ಕುರಿತು ಸಾರ್ವಜನಿಕರಿಂದ ದೂರು ಬಂದರೆ ಅಂತಹ ಗ್ರಾಮ ಒನ್, ಕರ್ನಾಟಕ ಒನ್ ಸೇವಾಕೇಂದ್ರಗಳ ಪರವಾನಗಿ ರದ್ದುಪಡಿಸಲಾಗುವುದು. ಅಲ್ಲಿ ಶುಲ್ಕ ರೂಪದಲ್ಲಿ ಹಣ ತೆಗೆದುಕೊಂಡಿಲ್ಲ ಎಂದು ಕೇಂದ್ರದವರು ಹೇಳಿದ್ದಾರೆ. ಸಾರ್ವಜನಿಕರಲ್ಲಿ ವಿಚಾರಿಸಿದಾಗಲೂ ನಾವು ಯಾರಿಗೂ ಹಣ ಕೊಟ್ಟಿಲ್ಲ ಎಂದಿದ್ದಾರೆ. ಆದರೆ ಫಲಾನುಭವಿಯಾಗಿ ನೋಂದಾಯಿಸಿರುವ ದಾಖಲೆಯ ಲ್ಯಾಮಿನೇಶನ್‌ಗೆ 40 ರೂ. ಹಣ ಪಡೆಯುತ್ತಾರೆ. ಇದು ಕಡ್ಡಾಯವಲ್ಲ.
>
> **– ಶೃತಿ ಮಳ್ಳಪ್ಪಗೌಡ್ರ,**
> ತಹಸೀಲ್ದಾರರು.

**ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಗೃಹಲಕ್ಷ್ಮೀ ಯೋಜನೆಗೆ ಹೆಸರು ನೋಂದಣಿ ಕಾರ್ಯ ಆರಂಭವಾಗಿದ್ದು, ನೋಂದಣಿ ಕೇಂದ್ರಗಳ ಮುಂದೆ ದಿನಗಟ್ಟಲೆ ಸರತಿ ಸಾಲಿನಲ್ಲಿ ನಿಂತು ಮಹಿಳೆಯರು ಹೈರಾಣಾಗುತ್ತಿದ್ದಾರೆ. ನಗರದ ತಹಸೀಲ್ದಾರ ಕಚೇರಿ ಬಳಿಯ ಪುರಸಭೆ ಗಾಂಧಿ ಭವನದಲ್ಲಿರು ಕರ್ನಾಟಕ ಒನ್ ಕೇಂದ್ರದ ಮುಂದೆ ಬೆಳಿಗ್ಗೆಯೇ ಸರತಿಯಲ್ಲಿ ನಿಂತ ಮಹಿಳೆಯರ ಉದ್ದನೆಯ ಸಾಲು ಸೃಷ್ಟಿಯಾಗಿತ್ತು. ಮಹಿಳೆಯರು ಜಿಟಿಜಿಟಿ ಮಳೆಯನ್ನೂ ಲೆಕ್ಕಿಸದೆ

> ಗೃಹಲಕ್ಷ್ಮೀ ಯೋಜನೆಗೆ ಫಲಾನುಭವಿಗಳು ಅರ್ಜಿ ಸಲ್ಲಿಸುವ ಕಾರ್ಯ ಪ್ರಾರಂಭಗೊಂಡಿದ್ದು, ತಾಂತ್ರಿಕ ಸಮಸ್ಯೆಯಿಂದ ಮಹಿಳೆಯರಿಗೆ ನಿತ್ಯವೂ ಕೇಂದ್ರಗಳೆದುರು ಕಾಯುವ ಸಂಕಷ್ಟ ಎದುರಾಗಿದೆ. ಅರ್ಜಿ ಸಲ್ಲಿಸಲು ಕೂಲಿ ಕೆಲಸವನ್ನು ಬಿಟ್ಟು ಬೆಳಗ್ಗೆಯಿಂದಲೂ ಕಾಯುತ್ತಿದ್ದಾರೆ. ಈ ಪ್ರಕ್ರಿಯೆಗೆ ಅನುಕೂಲವಾಗುವಂತೆ ಹೆಚ್ಚಿನ ಸಿಬ್ಬಂದಿಗಳನ್ನು ನಿಯೋಜಿಸಬೇಕು.
>
> **– ಅಡೆವೆಪ್ಪ ಛಲವಾದಿ.**
> ಸಾಮಾಜಿಕ ಹೋರಾಟಗಾರ.

ಸರತಿ ಸಾಲಿನಲ್ಲಿ ನಿಂತು ಹೆಸರು ನೋಂದಾವಣೆಗಾಗಿ ಕಾಯುತ್ತಿದ್ದರು. ಕರ್ನಾಟಕ ಒನ್ ಕೇಂದ್ರದ ಬಾಗಿಲು ತೆರೆಯುವುದು ಬೆಳಿಗ್ಗೆ 9 ಗಂಟೆಗೆ. ಆದರೆ ಕೆಲ ಮಹಿಳೆಯರು ನಸುಕಿನ 6.30ಕ್ಕೇ ಎದ್ದು ಬಂದು ಸಾಲಿನಲ್ಲಿ ನಿಂತು ಕಾಯುತ್ತಿದ್ದರು.

ಮಹಿಳೆಯರಷ್ಟೇ ಅಲ್ಲದೆ, ಪುರುಷರೂ ಯಜಮಾನಿ ಮಹಿಳೆಯ ಪರವಾಗಿ ಸರತಿ ಸಾಲಿನಲ್ಲಿ ನಿಂತು ಕಾಯುತ್ತಿದ್ದರು. ಆದರೆ, ನೋಂದಣಿ ಕೇಂದ್ರದ



ಸಿಬ್ಬಂದಿ ನೀಡಿದ ಉತ್ತರ ಜನರಲ್ಲಿ ನಿರಾಸೆ ಮೂಡಿಸಿತ್ತು. ಸಾಲಿನಲ್ಲಿ ನಿಂತಿದ್ದ ಜನರನ್ನು ಕಂಡ ಸಿಬ್ಬಂದಿ, ಸರ್ವರ್ ಸಮಸ್ಯೆಯಿರುವುದರಿಂದ ಇಂದು ಗೃಹಲಕ್ಷ್ಮೀ ಯೋಜನೆಯ ನೋಂದಣಿ ಮಾಡುವುದಿಲ್ಲ. ಕೇವಲ ಆಧಾರ್ ಕಾರ್ಡ್ ತಿದ್ದುಪಡಿ ಇದ್ದಲ್ಲಿ ಮಾತ್ರ ಮಾಡಿಕೊಡಲಾಗುವುದು ಎಂದು ತಿಳಿಸಿದರು. ಬಂದ ದಾರಿಗೆ ಸುಂಕ ಇಲ್ಲ ಎಂಬಂತೆ ಗೊಣಗುತ್ತಾ ಮನೆಯ ಹಾದಿ ಹಿಡಿದರು.

ಈ ಎಲ್ಲ ಗೋಜಲುಗಳ ನಡುವೆ, ಯೋಜನೆಗೆ ಹೆಸರು ನೋಂದಾಯಿಸಲು ಸೂಚಿತ ಕೇಂದ್ರಗಳ ಬಳಿ ದಿನಗಟ್ಟಲೆ ಕಾಯುವುದು ಸವಾಲಿನ ಕೆಲಸವಾಗಿ ಪರಿಣಮಿಸಿದೆ. ಇಷ್ಟಾದರೂ ನೋಂದಣಿ ಮಾಡಿಸುವವರೆಗೂ ಖಾತ್ರಿ ಇಲ್ಲ. ನೋಂದಣಿಗೆ ಸಾಕಷ್ಟು ಸಮಯ ತೆಗೆದುಕೊಳ್ಳುತ್ತಿದೆ.

ಸರ್ವರ್ ಕೈಕೊಟ್ಟಲ್ಲಿ ಅಂದಿನ ಸಮಯ ಹಾಗೂ ಶ್ರಮ ಎರಡೂ ವ್ಯರ್ಥವಾಗುತ್ತದೆ. ಹಾಗಾಗಿ ಸರ್ಕಾರ ಈ ಪ್ರಕ್ರಿಯೆಯನ್ನು ಸಾಧ್ಯವಾದಷ್ಟು ಸರಳೀಕರಿಸಬೇಕೆಂದು ಸಾರ್ವಜನಿಕರು ಆಗ್ರಹಿಸುತ್ತಿದ್ದಾರೆ. ಅಲ್ಲದೆ, ನೋಂದಣಿ ಉಚಿತವೆಂದು ಅಧಿಕಾರಿಗಳು ತಿಳಿಸಿದರೆ, ಕೆಲ ಗ್ರಾಮ ಒನ್ ಕೇಂದ್ರಗಳಲ್ಲಿ ಹೆಸರು ನೋಂದಾಯಿಸಲು 100 ರೂ ಶುಲ್ಕ ಪಡೆಯುತ್ತಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ.

# ಗದಗ ಜಿಲ್ಲೆಯ ವಿವಿಧೆಡೆ ಹೊಸ ನ್ಯಾಯಬೆಲೆ ಅಂಗಡಿಗೆ ಅರ್ಜಿ ಆಹ್ವಾನ

ಮೊದಲನೇ ಪುಟದಿಂದ

ಹೊಸ ನ್ಯಾಯ ಬೆಲೆ ಅಂಗಡಿಗೆ ಮಂಜೂರಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 23 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಸಹಾಯಕ ನಿರ್ದೇಶಕರ ಕಚೇರಿ, ಆಹಾರ ನಾಗರಿಕ ಸರಬರಾಜು, ಗದಗ ಪಡಿತರ, ಗದಗ ಸಲ್ಲಿಸಬಹುದಾಗಿದೆ. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗದಗ ತಹಸೀಲ್ದಾರ ಕಚೇರಿ ಅಥವಾ ಉಪನಿರ್ದೇಶಕರ ಕಚೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾಡಳಿತ ಭವನ ಗದಗ ಇವರ ಕಾರ್ಯಾಲಯದಿಂದ ಪಡೆಯಬಹುದಾಗಿದೆ.

**ಮುಂಡರಗಿ ತಾಲೂಕಿನಲ್ಲಿ:**

ಮುಂಡರಗಿ ತಾಲೂಕಿನ ಬಸಾಪುರ, ಡೋಣಿ, ಶಿಂಗಟಾಯನಕೆರೆ ತಾಂಡಾ, ಮಕ್ತಂಪುರ, ಕಕ್ಕೂರ, ಕಕ್ಕೂರ ತಾಂಡ, ಬೂದಿಹಾಳ, ಹಳ್ಳಿಗುಡಿ, ಮುಂಡವಾಡ, ಚಿಕ್ಕವಡ್ಡಟ್ಟಿ ಗ್ರಾಮಗಳಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 27 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಮುಂಡರಗಿ ತಹಸೀಲ್ದಾರರ ಕಚೇರಿಗೆ ಸಲ್ಲಿಸಬಹುದಾಗಿದೆ. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಮುಂಡರಗಿ ತಹಸೀಲ್ದಾರ ಕಚೇರಿ ಅಥವಾ ಉಪನಿರ್ದೇಶಕರ ಕಚೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾಡಳಿತ ಭವನ ಗದಗ ಇವರ ಕಾರ್ಯಾಲಯದಿಂದ ಪಡೆಯಬಹುದಾಗಿದೆ.

**ಗದಗ ತಾಲೂಕಿನ ನಾಗಾ ತಾಂಡಾ:**

ಗದಗ ತಾಲೂಕಿನ ನಾಗಾ" ತಾಂಡಾದಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 22ಕೊನೆಯ ದಿನವಾಗಿದ್ದು, ಅರ್ಜಿಯನ್ನು ಗದಗ ತಹಸೀಲ್ದಾರರ ಕಚೇರಿಗೆ ಸಲ್ಲಿಸಬಹುದಾಗಿದೆ. ಅರ್ಜಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಗದಗ ತಹಸೀಲ್ದಾರ ಕಚೇರಿ ಅಥವಾ ಉಪನಿರ್ದೇಶಕರ ಕಚೇರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾಡಳಿತ ಭವನ ಗದಗ ಇವರ ಕಾರ್ಯಾಲಯದಿಂದ ಪಡೆಯಬಹುದಾಗಿದೆ.

**ಗಜೇಂದ್ರಗಡ ತಾಲೂಕಿನಲ್ಲಿ:**

ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ರಾಂಪೂರ, ಅಮರಗಟ್ಟಿ ಗ್ರಾಮಗಳಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಗಸ್ಟ್ 27 ಕೊನೆಯ ದಿನವಾಗಿದ್ದು, ಅರ್ಜಿಯನ್ನು ಗಜೇಂದ್ರಗಡ ತಹಸೀಲ್ದಾರರ ಕಚೇರಿಗೆ ಸಲ್ಲಿಸಬಹುದು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಗಜೇಂದ್ರಗಡ ತಹಸೀಲ್ದಾರರ ಕಚೇರಿ ಅಥವಾ ಉಪನಿರ್ದೇಶಕರ ಕಚೆರಿ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾಡಳಿತ ಭವನ, ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ.

# ಅರ್ಜಿ ಆಹ್ವಾನ

**ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಮುಂಡರಗಿ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಕಾಲೇಜಿಗೆ 2023-24ನೇ ಸಾಲಿಗೆ ವಿಜ್ಞಾನ ವಿಭಾಗ (ಪಿ.ಸಿ.ಎಂ.ಬಿ) ಹಾಗೂ ವಾಣಿಜ್ಯ ವಿಭಾಗದ (ಸಿ.ಇ.ಬಿ.ಎ) ಪ್ರಥಮ ಪಿ.ಯು.ಸಿ. ಆಂಗ್ಲ ಮಾಧ್ಯಮ ವಸತಿ ಕಾಲೇಜು ಪ್ರವೇಶಕ್ಕೆ ಪ್ರತಿ ವಿಭಾಗಕ್ಕೆ 60 ವಿದ್ಯಾರ್ಥಿಗಳ ದಾಖಲಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇದರಲ್ಲಿ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು ಹಾಗೂ ಪ.ಜಾ, ಪ.ಪಂ. ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ವಿಜ್ಞಾನ ವಿಭಾಗದ ಪ್ರಥಮ ಪಿ.ಯು.ಸಿ.ಗೆ ಪ್ರವೇಶ ಪಡೆಯಬಹುದಾಗಿದ್ದು, ಖುದ್ದು ವಸತಿ ಕಾಲೇಜಿಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು.

ವಿಜ್ಞಾನ ವಿಭಾಗ (ಪಿ.ಸಿ.ಎಂ.ಬಿ) ಹಾಗೂ ವಾಣಿಜ್ಯ ವಿಭಾಗದ (ಸಿ.ಇ.ಬಿ.ಎ) ದಲ್ಲಿ ಪ್ರಥಮ ಪಿ.ಯು.ಸಿ. ದಾಖಲಾತಿ ಬಯಸುವ ವಿದ್ಯಾರ್ಥಿಗಳಿಗೆ 75% ರಷ್ಟು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಹಾಗೂ 25% ರಷ್ಟು ಇತರೇ ವರ್ಗದ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದಾಗಿದೆ. ವಿಕಲಚೇತನರಿಗೆ ಶೇ. 3% ರಷ್ಟು ಪ್ರವೇಶ ಮೀಸಲಿರಿಸಿದೆ.

10 ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಕುಟುಂಬದ ವಾರ್ಷಿಕ ಆದಾಯ ರೂ. 2.50 ಲಕ್ಷ ಮೀರಿರಬಾರದು, ಅರ್ಜಿಗಳನ್ನು ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿಶಾಲೆ. ಮುಂಡರಗಿ ಇಲ್ಲಿ ಅರ್ಜಿಗಳನ್ನು ಪಡೆದು ಆಗಸ್ಟ್ 5 ರೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿಶಾಲೆ. ಮುಂಡರಗಿ ಇವರನ್ನು ಸಂಪರ್ಕಿಸಬಹುದಾಗಿದೆ.

# ನಾವು ನೆಮ್ಮದಿಯಿಂದ ಇರಲು ಸೈನಿಕರ ಶ್ರಮವೇ ಕಾರಣ: ಸಚಿವ ಎಚ್.ಕೆ. ಪಾಟೀಲ

ಮೊದಲನೇ ಪುಟದಿಂದ

ಮೆಚ್ಚುವಂತಾಗಿದೆ. ವೀರನಾರಿಯರು ತಮ್ಮ ಕುಟುಂಬದ ಆಧಾರ ಸ್ಥಂಭವನ್ನು ದೇಶಕ್ಕಾಗಿ ನೀಡಿರುವದು ಅವರ ರಾಷ್ಟ್ರಪ್ರೇಮ ಮತ್ತು ಅಭಿಮಾನ ನಮ್ಮಲ್ಲಿ ಗೌರವ ಹೆಚ್ಚಿಸಿದೆ. ಈ ಕಾರ್ಯಕ್ರಮ ಸ್ಮರಣೆಗೆ ಮಾತ್ರ ಅಲ್ಲ ಯುವಕರಿಗೆ ರಾಷ್ಟ್ರ ಅಭಿಮಾನ ಮೂಡಿಸುವಲ್ಲಿ ಯಶಸ್ವಿಯಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ ಹೇಳಿದರು.

ವಿಧಾನ ಪರಿಷತ್ ಸದಸ್ಯ ಎಸ್ ವಿ ಸಂಕನೂರ ಮಾತನಾಡಿ, ದೇಶದ ಇತಿಹಾಸದಲ್ಲಿ ಜುಲೈ 26 ಯಾರು ಮರೆಯದ ದಿನವಾಗಿದೆ. ಪಾಕಿಸ್ತಾನ ವಿರುದ್ಧ ಯುದ್ಧದಲ್ಲಿ ವಿಜಯ ಗಳಿಸುವ ದಿನವಾಗಿದೆ. ದೇಶದಲ್ಲಿ ಹಲವಾರು ರಾಷ್ಟ್ರೀಯ ಕಾರ್ಯಕ್ರಮಗಳಲ್ಲಿ ಇದು ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಪಾಕ್ ಸೈನಿಕರನ್ನು ಹಿಮ್ಮೆಟ್ಟಿಸಿ ಜಗತ್ತಿಗೆ ಶಕ್ತಿ ಪ್ರದರ್ಶನ ಮೂಲಕ ಭಾರತದ ಸಂದೇಶವನ್ನು ನೀಡಿದ ದಿನವಾಗಿದೆ. ಭಾರತ ಶಾಂತಿಪ್ರಿಯ ದೇಶವಾಗಿದ್ದು ಯಾವುದೇ ದೇಶದವರ ತಂಟೆಗೆ ನಾವು ಹೋಗುವುದಿಲ್ಲ. ನಮ್ಮ ತಂಟೆಗೆ ಬಂದರೆ ನಾವು ಬಿಡುವುದಿಲ್ಲ. ಕಳೆದ 75 ವರ್ಷದ ಇತಿಹಾಸದಲ್ಲಿ ಯಾರ ವಿರುದ್ಧವು ಯುದ್ಧ ಮಾಡಿಲ್ಲ ಎಂದು ಹೇಳಿದ ಅವರು, ಕಾರ್ಗಿಲ್ ಯುದ್ಧವು ಕಠಿಣವಾಗಿತ್ತು 18000 ಅಡಿ ಎತ್ತರದ ಶಿಖರದ ಮೇಲಿಂದ ಪಾಕ್ ಸೈನಿಕರು ದಾಳಿ ಮಾಡುತ್ತಿದ್ದರು ನಮ್ಮ ಸೈನಿಕರು ಧೃತಿಗೆಡದೆ 83 ದಿನಗಳವರೆಗೆ ಹೋರಾಟದಲ್ಲಿ 500 ಕ್ಕೂ ಹೆಚ್ಚು ಸೈನಿಕರು ಹುತಾತ್ಮರಾಗಿ ಜಯವನ್ನು ತಂದುಕೊಟ್ಟಿದ್ದಾರೆ. ಚೈನಾ ಇಂಡೋ ಪಾಕ್ ಹಾಗೂ ಕಾರ್ಗಿಲ್ ಯುದ್ಧದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಸಲ್ಲಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದರು.

ವೇದಿಕೆ ಮೇಲೆ ಸುಬೇದಾರ್ ಪವನ್ ಕುಮಾರ, ವೀರನಾರಿಯರ ಸಂಘದ ಅಧ್ಯಕ್ಷೆ ಇಂದಿರಾ ಹೆಬಸೂರ, ಕಾಂಗ್ರೆಸ್ ಯುವ ಮುಖಂಡ ಪ್ರಕಾಶ ಕರಿ, ಮಾಜಿ ಸೈನಿಕರಾದ ದತ್ತಣ್ಣ ಜೋಶಿ, ಎಚ್, ಎಂ,ದಳವಾಯಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಬಸಲಿಂಗಪ್ಪ ಮುಂಡರಗಿ ಸೇರಿದಂತೆ ಮುಂತಾದವರು ಇದ್ದರು. ಇದಕ್ಕೂ ಮುನ್ನ ಟಿಪ್ಪು ವೃತ್ತದಿಂದ ಕೆ.ಎಚ್. ಪಾಟೀಲ ಸಭಾಭವನದ ವರೆಗೆ ಯುವಕರು ಬೈಕ್ ರಾಲಿ ಮೂಲಕ ಗಣ್ಯರನ್ನು ತೆರೆದ ವಾಹನದ ಮೂಲಕ ಕರೆ ತಂದರು.

# ಎಲ್ಲ ವೃತ್ತಿಗಿಂತ ಶಿಕ್ಷಕ ವೃತ್ತಿ ದೊಡ್ಡದು: ಶಾಸಕ ಡಾ.ಚಂದ್ರು ಲಮಾಣಿ

**ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**



ಸಮಾಜದಲ್ಲಿ ಶಿಕ್ಷಕರಿಗೆ ಅಪಾರ ಗೌರವ ನೀಡಲಾಗುತ್ತದೆ. ಸಾವಿರಾರು ಮಕ್ಕಳಿಗೆ ಅಕ್ಷರ ಜ್ಞಾನ ನೀಡುವ ಶಿಕ್ಷಕರ ಸೇವೆ ಎಂದೆಂದಿಗೂ ಸ್ಮರಣಾರ್ಹವಾಗಿದೆ. ವಿದ್ಯೆಯೊಂದಿಗೆ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿ, ಅವರನ್ನು ಸಮಾಜದ ಉತ್ತಮ ನಾಗರಿಕರನ್ನಾಗಿ ಸಿದ್ಧಮಾಡುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ ಎಂದು ಶಾಸಕ ಡಾ.ಚಂದ್ರು ಲಮಾಣಿ ಹೇಳಿದರು.

ಪಟ್ಟಣದ ಇಂದಿರಾನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಜಿಲ್ಲಾ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಎ.ಎಫ್. ನೀಲಗುಂದ ಅವರಿಗೆ ಶಿಷ್ಯರು, ಅಭಿಮಾನಿಗಳು ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರನ್ನು ಸನ್ಮಾನಿಸಿ ಮಾತನಾಡಿದರು.

ಎಲ್ಲ ವೃತ್ತಿಗಿಂತ ಶಿಕ್ಷಕ ವೃತ್ತಿ ದೊಡ್ಡದು. ಒಂದು ಮಗುವಿಗೆ ಈ ಸಮಾಜದ ಏಳು-ಬೀಳುಗಳನ್ನು ತಿಳಿಹೇಳಿ, ಉತ್ತಮ ನಾಗರಿಕರನ್ನಾಗಿ ಮಾಡುವ ಕಾರ್ಯವನ್ನು ಶಿಕ್ಷಕರು ಮಾಡುತ್ತಾರೆ. ಈ ನಿಟ್ಟಿನಲ್ಲಿ ಶ್ರೀಯುತರು ತಮ್ಮ ಸೇವಾ ಅವಧಿಯಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುವ ಮಹತ್ವದ ಕಾರ್ಯವನ್ನು ಪ್ರಾಮಾಣಿಕವಾಗಿ ಮಾಡಿದ್ದು, ತಮ್ಮ ವೃತ್ತಿಯಲ್ಲಿ ಶ್ರೇಷ್ಠತೆಯನ್ನು ಮೆರೆದಿದ್ದಾರೆ. ಅವರ ನಿವೃತ್ತ ಜೀವನ ಸುಖಕರವಾಗಿರಲ್ತೆಂದು ಶಾಸಕರು ಹಾರೈಸಿದರು.

ತಾಲೂಕಾ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಬಿ.ಎಸ್ ಈಳಿಗೇರ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕಿ ರೇಖಾ ಬೂದಿಹಾಳ, ರಮೇಶ ರಿತ್ತಿ, ನಾಗರಾಜ, ಕಸಾಪ ತಾಲೂಕು ಘಟಕದ ಅಧ್ಯಕ್ಷ ಈಶ್ವರ ಮೆಡ್ಲೇರಿ, ಬಿ.ಎಂ ಕುಂಬಾರ, ಪುರಸಭೆ ಸದಸ್ಯೆ ಅಶ್ವಿನಿ ಅಂಕಲಕೋಟಿ, ಎಚ್.ಡಿ ನಿಂಗರೆಡ್ಡಿ, ವ್ಹಿ.ಕೆ ಪೂಜಾರ, ಕುಲಕರ್ಣಿ ಮುಂತಾದವರಿದ್ದರು.

# ಸೇತುವೆಗಳ ಮುಳುಗಡೆ ಶಾಶ್ವತ, ಪರ್ಯಾಯ ಮಾರ್ಗ ನಿರ್ಮಾಣ ಸಾಧ್ಯತೆ ಪರಿಶೀಲಿಸಿ

ಮೊದಲನೇ ಪುಟದಿಂದ

ಕ್ರಮಗಳನ್ನು ಕೈಗೊಳ್ಳಬೇಕು. ಅಪಾಯದ ಮಟ್ಟ ಮೀರಿ ಹರಿಯುವ ನದಿಗಳು ಮತ್ತು ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಅವುಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಇದಲ್ಲದೇ ಅಪಾಯಕಾರಿ ಸ್ಥಳಗಳಿಗೆ ತೆರಳದಂತೆ ನಿರ್ಬಂಧ ವಿಧಿಸಬಹುದು ಎಂದರು.

ಕಂದಾಯ, ಗ್ರಾಮೀಣಾಭಿವೃದ್ಧಿ, ಪೊಲೀಸ್ ಸೇರಿದಂತೆ ಸಂಬಂಧಿಸಿದ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕೆಲಸ ಮಾಡುವ ಮೂಲಕ ಮಾನವ ಜೀವಹಾನಿ ಕಡಿಮೆಗೊಳಿಸುವುದು ಸಾಧ್ಯವಾಗಲಿದೆ. ಪ್ರತಿವರ್ಷ ಮುಳುಗಡೆಯಾಗುವ ನದಿತೀರದ ಗ್ರಾಮಗಳ ಶಾಶ್ವತ ಸ್ಥಳಾಂತರಕ್ಕೆ ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿ, ಪ್ರತಿಯೊಬ್ಬ ಅಧಿಕಾರಿಗಳು ಕೇಂದ್ರ ಸ್ಥಾನಗಳಿಯೇ ಇರಬೇಕು ಎಂದು ಸೂಚನೆ ನೀಡಿದರು.

**ಗದಗ ಜಿಲ್ಲೆ:**

ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಕೆ.ಪಾಟೀಲ ಮಾತನಾಡಿ,

> **ಕಟ್ಟಡಗಳ ದುರಸ್ತಿಗೆ ಕಟ್ಟುನಿಟ್ಟಿನ ಸೂಚನೆ**
>
> ಜಿಲ್ಲಾ-ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳು, ಶಾಲೆಗಳು, ಅಂಗನವಾಡಿ ಕೇಂದ್ರಗಳು, ವಸತಿನಿಲಯಗಳು ಸೇರಿದಂತೆ ಸರಕಾರಿ ಕಟ್ಟಡಗಳನ್ನು ಪರಿಶೀಲಿಸಿ ಅಗತ್ಯವಿರುವ ಕಡೆಗಳಲ್ಲಿ ಕೂಡಲೇ ದುರಸ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಏನಾದರೂ ಸಮಸ್ಯೆಯಾದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು. ರಾಜ್ಯ ವಿಪತ್ತು ನಿರ್ವಹಣಾ ಅನುದಾನದಡಿ ಕಟ್ಟಡಗಳ ದುರಸ್ತಿಗೆ ಅವಕಾಶವಿದ್ದು, ಈ ಅನುದಾನ ಬಳಸಿಕೊಂಡು ತಕ್ಷಣವೇ ದುರಸ್ತಿಗೊಳಿಸಬೇಕು ಎಂದು ಕಂದಾಯ ಇಲಾಖೆಯ ಸಚಿವರಾದ ಕೃಷ್ಣ ಭೈರೇಗೌಡ ತಿಳಿಸಿದರು. ಎಸ್.ಡಿ.ಆರ್.ಎಫ್ ಹಾಗೂ ಎನ್.ಡಿ.ಆರ್.ಎಫ್. ಕೈಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದರು. ಪ್ರವಾಹ ಸಂದರ್ಭದಲ್ಲಿ ಮಾನವ ಜೀವಹಾನಿ, ಜಾನುವಾರುಗಳ ಜೀವಹಾನಿ, ಸಾರ್ವಜನಿಕರ ಆಸ್ತಿ ರಕ್ಷಣೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು ನಿರ್ದೇಶನ ನೀಡಿದರು. ಕೆಲವೆಡೆ ಇನ್ನೂ ಬಿತ್ತನೆ ನಡೆಯಲಿರುವುದರಿಂದ ಅಗತ್ಯವಿರುವ ಬೀಜ, ಗೊಬ್ಬರವನ್ನು ಒದಗಿಸಬೇಕು ಎಂದು ತಿಳಿಸಿದರು.

ಅತಿಯಾದ ಮಳೆಯಿಂದಾಗಿ ಮನೆ ಕುಸಿತಗೊಳ್ಳುವ ಸಾಧ್ಯತೆಗಳಿದ್ದು, ಶಿಥಿಲಾವಸ್ಥೆಯಲ್ಲಿರುವ ಮನೆಗಳಲ್ಲಿ ವಾಸಿಸುವವರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಬೇಕು. ಪ್ರವಾಹ ಉಂಟಾಗಬಹುದಾದ ಗ್ರಾಮಗಳಲ್ಲಿ ಮುಂಜಾಗೃತಾ ಕ್ರಮಗಳನ್ನು ಜಿಲ್ಲಾಡಳಿತದಿಂದ ಕೈಗೊಳ್ಳಬೇಕು ಎಂದರು. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಹೆಚ್ಚಾಗಿ ಖಾಸಗಿ ಲೇವಾದೇವಿಗಾರರ ಕಿರುಕಳ ಮುಖ್ಯ ಕಾರಣವಾಗಿದ್ದು ಅದಕ್ಕೇ ಕಡಿವಾಣ ಹಾಕುವ ಅಗತ್ಯವಿದೆ. ಗ್ರಾಮ ಪಂಚಾಯತ ಮಟ್ಟದಲ್ಲಿ ಆತ್ಮಹತ್ಯೆ ಮಾಡಿಕೊಳ್ಳಬಹುದಾದ ವ್ಯಕ್ತಿಗಳ ಕುರಿತು ಮಾಹಿತಿ ದೊರೆತಲ್ಲಿ ಸ್ಥಳೀಯವಾಗಿ ಕ್ರಮ ವಹಿಸಲು ಅವಕಾಶ ನೀಡಬೇಕು ಎಂದರು. ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಲ್ಲ ಜಿಲ್ಲಾಧಿಕಾರಿಗಳು ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಲ ವಸೂಲಾತಿಯಲ್ಲಿ ಕಿರುಕಳ ಆಗದಂತೆ ಶಿಸ್ತು ಕ್ರಮ ವಹಿಸಬೇಕು. ಪೊಲೀಸ್ ಇಲಾಖೆಯಿಂದಲೂ ಈ ಕುರಿತು ಸೂಕ್ತ ಕ್ರಮಗಳನ್ನು ಅನುಸರಿಸುವಂತೆ ತಿಳಿಸಿದರು.

ಗದಗ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಮಾತನಾಡಿ, ಜಿಲ್ಲೆಯ ಅತಿವೃಷ್ಠಿ ಹಾಗೂ ಪ್ರವಾಹ ಪರಿಸ್ಥಿತಿ ಕುರಿತು ವಿವರವಾದ ಮಾಹಿತಿಯನ್ನು ಹಾಗೂ ಕೈಗೊಂಡ ಮುಂಜಾಗೃತಾ ಕ್ರಮಗಳ ಕುರಿತು ಸಭೆಗೆ ಮಾಹಿತಿ ಒದಗಿಸಿದರು.

**ರಾಜ್ಯದಲ್ಲಿ 2682 ಮನೆಗಳ ಭಾಗಶಃ ಕುಸಿತ:**

ರಾಜ್ಯದಲ್ಲಿ ಇದುವರೆಗೆ 38 ಮಾನವ ಜೀವಹಾನಿಯಾಗಿದೆ. 57 ಮನೆಗಳು ಸಂಪೂರ್ಣವಾಗಿ ಕುಸಿದಿದ್ದು, 2682 ಮನೆಗಳು ಭಾಗಶಃ ಕುಸಿದಿರುತ್ತವೆ.

185 ಹೆಕ್ಟೇರ್ ಕೃಷಿ ಬೆಳೆ ಹಾಗೂ 356 ಹೆಕ್ಟೇರ್ ಪ್ರದೇಶದಲ್ಲಿನ ತೆ-ೂಟಗಾರಿಕೆ ಬೆಳೆ ಸೇರಿದಂತೆ ಒಟ್ಟಾರೆ 541.39 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಜಲಾವೃತಗೊಂಡಿರುತ್ತದೆ ಎಂದು ಅಧಿಕಾರಿಗಳು ಮಾಹಿತಿಯನ್ನು ನೀಡಿದರು. ಸಚಿವರಾದ ಜಿ.ಪರಮೇಶ್ವರ್, ಚಲುವರಾಯಸ್ವಾಮಿ, ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ, ಲಕ್ಷ್ಮೀ ಹೆಬ್ಬಾಳಕರ್, ಈಶ್ವರ್ ಖಂಡ್ರೆ, ಡಾ.ಎಂ.ಸಿ.ಸುದಾಕರ ಮತ್ತಿತರರು ವಿಡಿಯೋ ಸಂವಾದದಲ್ಲಿ ಮುಖ್ಯಮಂತ್ರಿಗಳ ಜತೆ ಉಪಸ್ಥಿತರಿದ್ದರು.

ಗದಗ ಜಿಲ್ಲಾ ಪೊಲೀಸ್ ಅಧೀಕ್ಷಕ ಬಿ.ಎಸ್. ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ, ಉಪವಿಭಾಗಾಧಿಕಾರಿ ಗಂಗಪ್ಪ ಎಂ ಮತ್ತಿತರ ಇಲಾಖೆಗಳ ಅಧಿಕಾರಿಗಳು ವಿಡಿಯೋ ಸಂವಾದ ವೇಳೆ ಹಾಜರಿದ್ದರು.

# ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟನೆ



**ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಶಿಸ್ತು, ಸಂಯಮ, ನಾಯಕತ್ವಗುಣ, ವೃತ್ತಿಗೌರವ, ಜಾತ್ಯಾತೀತ ಮತ್ತು ಭಾವೈಕ್ಯತೆಯ ಮನೋಭಾವ ಮೂಡಿಸುವ ವೇದಿಕೆಯಾಗಿದೆ ಎಂದು ಲಕ್ಷ್ಮೇಶ್ವರದ ತಾಯಿ ಪಾರ್ವತಿ ಮಕ್ಕಳ ಬಳಗ ಶಿಕ್ಷಣ ಸಂಸ್ಥೆಯ ಖಜಾಂಚಿ ಜಯಲಕ್ಷ್ಮೀ ಮಹಾಂತಶೆಟ್ಟರ ಹೇಳಿದರು.

ಅಡರಕಟ್ಟಿ ಗ್ರಾಮದಲ್ಲಿ ಮಕ್ಕಳ ಬಳಗದ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಿಂದ ಹಮ್ಮಿಕೊಂಡಿರುವ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಜಯಲಕ್ಷ್ಮೀ ಗಡ್ಡದೇವರಮಠ ಮಾತನಾಡಿ, ಎನ್‌ಎಸ್‌ಎಸ್ ಘಟಕದ ವಿದ್ಯಾರ್ಥಿಗಳು ಗ್ರಾಮದಲ್ಲಿ ಸ್ವಚ್ಛತಾ ಕಾರ್ಯ, ಆರೋಗ್ಯಕರ ಸಮಾಜದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು, ವಿವಿಧ ವಿಷಯಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು. ರೋಹಿಣಿಬಾಯಿ ಬಹದ್ದೂರದೇಸಾಯಿ, ಶಾರಕ್ಕ ಮಹಾಂತಶೆಟ್ಟರ, ಜೆ.ಡಿ ಲಮಾಣಿ, ಗ್ರಾಮದ ಹಿರಿಯರಾದ ಮುದಿಯಪ್ಪ ಹವಳದ, ರಾಮಣ್ಣ ಚಿಕ್ಕಣ್ಣವರ, ಎಸ್.ಆರ್ ಸೋಮಣ್ಣವರ, ಎಸ್.ಕೆ ಡಂಬಳ, ಪ್ರಾಚಾರ್ಯ ವಿ.ಬಿ ಬಿಳೇಯಲಿ ಸೇರಿ ಹಲವರಿದ್ದರು. ಪರಮೇಶ ತಡಹಾಳ, ಮೇಘಾ ಬೋಮಲೆ ನಿರ್ವಹಿಸಿದರು.

# ವಿದ್ಯಾರ್ಥಿಗಳ ಸಾಧನೆಗೆ ಕುಲಪತಿಗಳ ಶ್ಲಾಘನೆ

■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ



ತಾಲೂಕಿನ ಅಳವಂಡಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳು ಈಚೆಗೆ ತುಮಕೂರಿನಲ್ಲಿ ನಡೆದ ಮಾಧ್ಯಮ ಹಬ್ಬದ ಎರಡು ಸ್ಪರ್ಧೆಗಳಲ್ಲಿ ಪಾರಿತೋಷಕ, ಪ್ರಮಾಣಪತ್ರ ಹಾಗೂ ನಗದು ಹಣ ಪಡೆದು ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿರುವುದನ್ನು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ ಶ್ಲಾಘಿಸಿದರು.

ವಿವಿಯ ತಮ್ಮ ಕಚೇರಿಗೆ ಬುಧವಾರ ವಿಜೇತ ವಿದ್ಯಾರ್ಥಿಗಳನ್ನು ಆಹ್ವಾನಿಸಿ, ವಿದ್ಯಾರ್ಥಿಗಳ ಸಾಧನೆಯನ್ನು ಕೊಂಡಾಡಿ ಅಭಿನಂದಿಸಿದರು.

ಗ್ರಾಮೀಣ ಭಾಗದ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಾ, ಅದೂ ಪತ್ರಿಕೋದ್ಯಮ ವಿಷಯದ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಗಳಿಸುವುದು ಸುಲಭಸಾಧ್ಯವಲ್ಲ. ಇದು ಬೋಧಕ ಸಿಬ್ಬಂದಿಯ ಕಾರ್ಯಕ್ಷಮತೆಗೆ ಹಿಡಿದ ಕನ್ನಡಿಯಾಗಿದೆ. ಕಾಲೇಜಿನ ಪ್ರಾಚಾರ್ಯರನ್ನು ಒಳಗೊಂಡಂತೆ ಎಲ್ಲ ಸಿಬ್ಬಂದಿ ಅಭಿನಂದನಾರ್ಹರು ಎಂದು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿವಿಯ ಮೌಲ್ಯಮಾಪನ ಕುಲಸಚಿವರಾದ ಪ್ರೊ.ಕೆ ವಿ.ಪ್ರಸಾದ್, ಯುವರಾಜ, ಅಳವಂಡಿ ಕಾಲೇಜಿನ ಪ್ರಾಚಾರ್ಯ ಡಾ.ಗವಿಸಿದ್ದಪ್ಪ ಮುತ್ತಾಳ, ಪತ್ರಿಕೋದ್ಯಮ ವಿಭಾಗದ ಉಪನ್ಯಾಸಕರಾದ ಬಸವರಾಜ ಕರುಗಲ್, ವಿಜಯಕುಮಾರ್ ಕುಲಕರ್ಣಿ, ವಾಣಿಜ್ಯ ವಿಭಾಗದ ಉಪನ್ಯಾಸಕ ರವಿ ಹಿರೇಮಠ, ಗ್ರಂಥಪಾಲಕರಾದ ಗೌತಮಿ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

# ಚಿಂಚಲಿ ಗ್ರಾ ಪಂ ಅಧ್ಯಕ್ಷ-ಉಪಾಧ್ಯಕ್ಷರ ಅವಿರೋಧ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ



ಸಮೀಪದ ಚಿಂಚಲಿ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ಅಧ್ಯಕ್ಷರಾಗಿ ದೇವಮ್ಮಾ ಹೇಮರೆಡ್ಡಿ ಬಂಗಾರಿ, ಉಪಾಧ್ಯಕ್ಷರಾಗಿ ಲಲಿತಾ ಮಾಲತೇಶ ಕುರಹಟ್ಟಿ ಅವಿರೋಧವಾಗಿ ಆಯ್ಕೆಯಾದರು.

ಕಾಂಗ್ರೆಸ್ ಯುವ ಮುಖಂಡ ಕೃಷ್ಣಗೌಡ ಪಾಟೀಲ, ಗಂಗಪ್ಪ ಕತ್ತಿ, ಬಿ ವಿ ಸುಂಕಾಪೂರ, ಬಸವರಾಜ ರಾಮರೆಡ್ಡಿ, ಕುಬಣ್ಣಾ ಬಂಗಾರಿ, ಅಜ್ಜಪ್ಪ ಹುಗ್ಗೆಣ್ಣವರ, ಗಿರೀಶ ಡಬಾಲಿ, ಅಪ್ಪಣ್ಣ ಇನಾಮತಿ, ನಾಗಪ್ಪ ಕುರಬರ, ಬಾಬಾಜಾನ ಕುದರಿಮೋತಿ, ಮಂಜು ಕಾಳೆ, ಮುತ್ತಪ್ಪ ದೊಡ್ಡಮನಿ, ಸುನೀಲ ಬಂಗಾರಿ, ನವೀನ ಬಂಗಾರಿ, ವೀರಭದ್ರಪ್ಪ ಪಟ್ಟಣಶೆಟ್ಟಿ, ಮಲ್ಲಪ್ಪ ಮಲ್ಲಿಗವಾಡ, ಚಂದ್ರು ಚಿಕ್ಕಗಸಿ, ಚಂದ್ರಶೇಖರ ಜಕ್ಕಮ್ಮನವರ, ಮಾಹಾದೇವಪ್ಪ ಕುರ್ತಕೋಟಿ, ಲಕ್ಷ್ಮೀ ನಾಯ್ಕರ್, ಪಿಡಿಓ ಅಶೋಕ ಕಂಬಿ ಸೇರಿದಂತೆ ಗ್ರಾ ಪಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸೈನಿಕರ ತ್ಯಾಗ, ಬಲಿದಾನಗಳನ್ನು ಸ್ಮರಿಸಬೇಕು



■ ವಿಜಯಸಾಕ್ಷಿ ಸುದ್ದಿ, ಕೊಪ್ಪಳ

ಇಲ್ಲಿನ ಭಾಗ್ಯನಗರದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇನ್ನರ್‌ವೀಲ್ ಕ್ಲಬ್ ಹಾಗೂ ಜೆಸಿಐ ಕ್ಲಬ್‌ಗಳ ಸಹಯೋಗದಲ್ಲಿ ಕಾರ್ಗಿಲ್ ವಿಜಯೋತ್ಸವ ಹಾಗೂ ಮಾಜಿ ಸೈನಿಕರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾರದಾ ಪಾನಘಂಟಿಯವರು ವಹಿಸಿದ್ದರು. ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ನಮ್ಮ ದೇಶದ ಹೆಮ್ಮೆಯ ಸೈನಿಕರ ಚಾರಿತ್ರಿಕ ಗೆಲುವಿಗೆ 24 ವರ್ಷ. ಈ ಸಂದರ್ಭದಲ್ಲಿ ನಾವೆಲ್ಲರೂ ಸೈನಿಕರ ತ್ಯಾಗ, ಬಲಿದಾನಗಳನ್ನು ಸ್ಮರಿಸಬೇಕು ಎಂದರು. ಸನ್ಮಾನ ಸ್ವೀಕರಿಸಿದ ಮಾಜಿ ಸೈನಿಕ ರಾಯಪ್ಪ, ಚಂದ್ರಕಾಂತ ಮಾತನಾಡಿ, ಹಿಮ ಬೀಳುವ ಪ್ರದೇಶ ಕಾರ್ಗಿಲ್ ಅತ್ಯಂತ ದುರ್ಗಮ ಪರ್ವತವಾಗಿದೆ. ಅಲ್ಲಿ ಹಿಮಕರಗಿಸಿ ನೀರು ಕುಡಿಯುವ ಪರಿಸ್ಥಿತಿಯಿದೆ. ಪ್ರಾಣ ಪಣಕಿಟ್ಟು ಹೋರಾಡಿ ಯುದ್ಧ ಗೆದ್ದಿದ್ದೇವೆ ಎಂದರು.

ಸಾಹಿತಿ, ಉಪನ್ಯಾಸಕ ಮಂಜುನಾಥ ಚಿತ್ರಗಾರ ಮಾತನಾಡಿ, ಸೈನಿಕರ ಬದುಕಿಗೆ ಸಾರ್ಥಕತೆಯಿದೆ. ದೇಶದಲ್ಲಿರುವವರೆಲ್ಲ ರಾಷ್ಟ್ರಾಭಿಮಾನಿಗಳಾದರೆ ಪರಕೀಯರ ದಾಳಿ ಅಸಾಧ್ಯ. ರಾಷ್ಟ್ರದ ಪ್ರಗತಿಗೆ ಸೇನೆ, ರೈತ ಹಾಗೂ ಸಾಹಿತಿಗಳ ಕೊಡುಗೆ ಅಪಾರ ಎಂದರು. ಇನ್ನರ್‌ವೀಲ್ ಕ್ಲಬ್ ಕಾರ್ಯದರ್ಶಿ ಸುವರ್ಣ ಗಂಟಿ, ಜೆಸಿಐನ ಸಂಸ್ಥಾಪಕ ಅಧ್ಯಕ್ಷೆ ಗೀತಾ ಪಾಟೀಲ್, ಮಾಜಿ ಸೈನಿಕ ಶಿವಣ್ಣ, ಖಜಾಂಚಿ ನಿರ್ಮಲ, ಶಾಲೆಯ ಮುಖ್ಯ ಶಿಕ್ಷಕ ಲಕ್ಷ್ಮಣ ತಳಕಲ್, ಶಾಂತಾ ಗೌಡರ್, ವಿರೂಪಾಕ್ಷಪ್ಪ ಬ್ಯಾಗೋಡಿ, ಕೀರ್ತಿ ಪಾಟೀಲ್, ವಿನಿತಾ ಪಟ್ಟಣಶೆಟ್ಟಿ, ನೀತು ಮೇಘರಾಜ ಮುಂತಾದವರು ಉಪಸ್ಥಿತರಿದ್ದರು.

ಕುಮಾರವ್ಯಾಸ ಮಹಾಭಾರತ ಪ್ರವಚನ ಉದ್ಘಾಟನೆಯಲ್ಲಿ ಸ್ವಾಮಿ ನಿರ್ಭಯಾನಂದ ಸರಸ್ವತಿ ಮಹಾಸ್ವಾಮಿಗಳು

# ಮಹಾಭಾರತವು ಜ್ಞಾನದ ಆಗರ

■ ವಿಜಯಸಾಕ್ಷಿ ಸುದ್ದಿ, ಗದಗ



ಮಾನವೀಯ ಅನುಭವಗಳ ಸಾಗರವಾದ ಮಹಾಭಾರತವು ಜ್ಞಾನದ ಆಗರವಾಗಿದೆ. ಪ್ರತಿಯೊಬ್ಬ ಭಾರತೀಯರು ಇದರ ಆಳವಾದ ಅಧ್ಯಯನಗೈಯಬೇಕೆಂದು ಗದಗ-ವಿಜಯಪುರ ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಪೂಜ್ಯಶ್ರೀ ನಿರ್ಭಯಾನಂದ ಸರಸ್ವತಿ ಮಹಾಸ್ವಾಮಿಗಳವರು ನುಡಿದರು.

ಅವರು ಕುಮಾರವ್ಯಾಸ ಮಹಾಭಾರತ ಪ್ರವಚನ ಸಂಚಲನಾ ಸಮಿತಿ ಹಾಗೂ ಎಪಿಎಂಸಿ ಆಶ್ರಯದಲ್ಲಿ ಗದುಗಿನ ಕೆ ಎಚ್ ಪಾಟೀಲ ಸಭಾಭವನದಲ್ಲಿ ಜರುಗಿದ ಪ್ರವಚನ ಚಕ್ರವರ್ತಿ ಪಾವಗಡ ಪ್ರಕಾಶರಾವ್ ಅವರ ಕುಮಾರವ್ಯಾಸ ಭಾರತದ ಪ್ರವಚನ ಮಾಲಿಕೆಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ ಮಾತನಾಡಿದರು.

ಈ ಪ್ರವಚನ ಕಾರ್ಯಕ್ರಮದಲ್ಲಿ ನಿರಂತರವಾಗಿ ಪ್ರಕೃತಿಯ ವೈಪರಿತ್ಯಗಳನ್ನೂ ಪರಿಗಣಿಸದೇ ಸದ್ಭಕ್ತರು ಪಾಲ್ಗೊಳ್ಳಬೇಕು. ಇಂತಹ ಪ್ರಸಿದ್ಧ ಪ್ರವಚನಕಾರರಿಂದ ಗದುಗಿನ ಭಾರತದ ಪ್ರವಚನವನ್ನು ಏರ್ಪಡಿಸಿರುವ ಪ್ರವಚನ ಸಂಚಾಲನಾ ಸಮಿತಿಯ ಕಾರ್ಯ ಶ್ಲಾಘನೀಯವಾಗಿದೆ ಎಂದು ನುಡಿದರು.

> ವ್ಯಾಸ ಮಹಾಭಾರತದ ಒಳಿತು-ಕೆಡುಕುಗಳು ವಿಶ್ವಕೋಶದಂತಿದ್ದು, ಮನುಕುಲಕ್ಕೆ ದಾರಿ ದೀಪವಾಗಿದೆ. ಇಂತಹ ಶ್ರೇಷ್ಠ ಮಹಾಕಾವ್ಯದ ಹತ್ತು ಪರ್ವಗಳನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿಯಾದ ಕುಮಾರವ್ಯಾಸನು ಶ್ರೀಕೃಷ್ಣನನ್ನು ನಾಯಕನನ್ನಾಗಿಸಿ ಪರಮಾದ್ಭುತವಾಗಿ, ಹೃದಯಸ್ಪರ್ಶಿಯಾಗಿ, ತನ್ನ ಕಾವ್ಯದಲ್ಲಿ ಕಟ್ಟಿಕೊಟ್ಟಿದ್ದಾನೆ. ಇಂತಹ ಮಹಾಕಾವ್ಯದ ಕುರಿತಾದ ಪ್ರವಚನವನ್ನು ಕೇಳುವ ಸೌಭಾಗ್ಯ ಗದುಗಿನ ಸದ್ಭಕ್ತರಿಗೆ ಪ್ರಾಪ್ತವಾಗಿದೆ.
>
> – ಶ್ರೀ ನಿರ್ಭಯಾನಂದ ಸರಸ್ವತಿ ಮಹಾಸ್ವಾಮಿಗಳು.
> ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷರು.

ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ಶಾಸಕ ಡಿ.ಆರ್ ಪಾಟೀಲ ಮಾತನಾಡಿ, ಇಂತಹ ಬಹುಶೃತ ವಿದ್ವಾಂಸರಾದ ಡಾ.ಪಾವಗಡ ಪ್ರಕಾಶರಾವ್ ಅವರ ಪ್ರವಚನ ಕಾರ್ಯಕ್ರಮದ ಸದುಪಯೋಗವನ್ನು ಗದುಗಿನ ಸಮಸ್ತ ಸದ್ಭಕ್ತರು ಪಡೆದುಕೊಳ್ಳಬೇಕೆಂದು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಕುಮಾರವ್ಯಾಸ ಮಹಾಭಾರತ ಪ್ರವಚನ ಸಂಚಾಲನಾ ಸಮಿತಿಯ ಹಿರಿಯ ಸದಸ್ಯರಾದ ಡಾ.ಎಸ್.ಬಿ ಶೆಟ್ಟರ ಅಧ್ಯಕ್ಷತೆ ವಹಿಸಿದ್ದರು. ಚಂದ್ರು ಬಾಳಿಹಳ್ಳಿಮಠ, ಕಲ್ಪನಾ ಪ್ರಕಾಶರಾವ್ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ವಿಭಾ ದೇಸಾಯಿ ಪ್ರಾರ್ಥನೆಗೈದರು. ಪ್ರವಚನ ಸಂಚಾಲನಾ ಸಮಿತಿಯ ಉಪಾಧ್ಯಕ್ಷ ಪ್ರೊ. ಅನಿಲ ವೈದ್ಯ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ದತ್ತಪ್ರಸನ್ನ ಪಾಟೀಲ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ನಂತರ ಡಾ.ಪಾವಗಡ ಪ್ರಕಾಶರಾವ್ ಅವರು ಪ್ರಥಮ ದಿನದ ಪ್ರವಚನ ನಡೆಸಿಕೊಟ್ಟರು.

ಸಮಾರಂಭದಲ್ಲಿ ಮುಕುಂದ ಪೋತ್ನಿಸ್, ಜೆ.ಕೆ.ಜಮಾದಾರ, ಡಾ.ವಿಜಯದತ್ತ ಮಂಗಸೂಳಿ, ಡಾ.ಅನಂತ ಶಿವಪುರ, ಶಶಿಧರ ಮೂರಶಿಳ್ಳೀನ, ಗುರುಮೂರ್ತಿ ದೇಶಪಾಂಡೆ, ಅನೀಲ ತೆಂಬದಮನಿ, ಹೇಮಂತ ಕುಲಕರ್ಣಿ, ಆರ್.ಎಸ್. ಕುಲಕರ್ಣಿ, ರವೀಂದ್ರ ಜೋಶಿ, ಅಂದಾನಪ್ಪ ವಿಭೂತಿ, ಕಲಾವತಿ ಅಲಬೂರ, ಗೋಪಾಲಕೃಷ್ಣ ತಾಸೀನ, ಮೋಹನ ಬೆಂಗಳೂರ, ರಾಜು ವರ್ಣೇಕರ್, ಕುಮಾರವ್ಯಾಸ ಪ್ರತಿಷ್ಠಾನದ ಸದಸ್ಯರು ಉಪಸ್ಥಿತರಿದ್ದರು.

# ಲಯನ್ಸ್ ಕ್ಲಬ್‌ನಿಂದ ಸಸಿ ನೆಡುವ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ



ಲಯನ್ಸ್ ಕ್ಲಬ್ ಗದಗ-ಬೆಟಗೇರಿ ಹಾಗೂ ಲಯನ್ ಲೇಡಿ ಕ್ಲಬ್‌ನಿಂದ ಇತ್ತೀಚೆಗೆ ಐತಿಹಾಸಿಕ ಕಪ್ಪತ್ತಗುಡ್ಡ ಪ್ರದೇಶದಲ್ಲಿ ವಿವಿಧ ಗಿಡಮೂಲಿಕೆಯ ಬೀಜದ ಉಂಡೆಗಳನ್ನು ಎಸೆಯುವ ಹಾಗೂ ಕದಾಂಪೂರ ಬಳಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ವಿವಿಧ ಗಿಡಮೂಲಿಕೆ ಮತ್ತು ಹಣ್ಣುಹಂಪಲುಗಳ ಬೀಜಗಳನ್ನು ಕಪ್ಪತ್ತಗುಡ್ಡದ ಫಲವತ್ತಾದ ಪ್ರದೇಶದಲ್ಲಿ ಎಸೆಯುವ ಮೂಲಕ ಸಸ್ಯ ಸಮೃದ್ಧಿಗೆ ಇದೊಂದು ಅಳಿಲು ಸೇವೆ ಎಂದು ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಅಧ್ಯಕ್ಷ ರಮೇಶ ಶಿಗ್ಲಿ ಹೇಳಿದರು.

ಈ ಸಂದರ್ಭದಲ್ಲಿ ಕ್ಲಬ್‌ನ ಕಾರ್ಯದರ್ಶಿ ಪ್ರವೀಣ ವಾರಕರ, ಖಜಾಂಚಿ ರಾಜು ಮಲ್ಲಾಡದ, ಲಯನ್ಸ್ ಲೇಡಿಸ್ ವಿಂಗ್‌ನ ಅಧ್ಯಕ್ಷೆ ಸಾವಿತ್ರಿ ಶಿಗ್ಲಿ, ಕಾರ್ಯದರ್ಶಿ ಅಮೃತಾ ವಾರಕರ, ಖಜಾಂಚಿ ಸುರೇಖಾ ಮಲ್ಲಾಡದ, ಡಾ. ಜೆ.ಸಿ ಶಿರೋಳ, ಡಾ.ರಾಜಶೇಖರ ಪಾಟೀಲ, ಡಾ.ಶ್ರೀಧರ ಕುರಡಗಿ, ಡಾ.ಪವನ ಪಾಟೀಲ, ಡಾ.ವಿಜಯ ಸಜ್ಜನರ, ಅಶ್ವಥ್ ಸುಲಾಖೆ, ನಿತೀಶ್ ಸಾಲಿ, ವೀಣಾ ಸುಲಾಖೆ ಹಾಗೂ ಕ್ಲಬ್‌ನ ಸದಸ್ಯರು ಪಾಲ್ಗೊಂಡಿದ್ದರು.

## ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ 2023-24ನೇ ಸಾಲಿನಲ್ಲಿ ಹೊಸದಾಗಿ ಪ್ರವೇಶ ಬಯಸುವ ಸಾಮಾನ್ಯ ಪದವಿ ಕೋರ್ಸಿನ್ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಬಯಸುವ ಪ್ರವರ್ಗ-1, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರುವ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ ರೂ. 2.50 ಲಕ್ಷ ಮತ್ತು ಪ್ರವರ್ಗ-2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿರುವ ಪೋಷಕರ ವಾರ್ಷಿಕ ವರಮಾನ ರೂ. 1 ಲಕ್ಷದೊಳಗಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿಗಳನ್ನು http://shp.karnataka.gov.in ವೆಬ್‌ಸೈಟ್ ಮೂಲಕ ಸಲ್ಲಿಸಬೇಕು. ಆಗಸ್ಟ್ 16 ರೊಳಗಾಗಿ ಅರ್ಜಿಗಳನ್ನು ಭರ್ತಿ ಮಾಡಬೇಕೆಂದು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಾದ ಸಿ.ವಿ. ಕರವೀರಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಿಷ್ಪಕ್ಷಪಾತವಾಗಿ ಕೆಲಸ ಮಾಡಿ, ಪ್ರಶಂಸೆಗೆ ಪಾತ್ರರಾಗಿ

■ ವಿಜಯಸಾಕ್ಷಿ ಸುದ್ದಿ, ರೋಣ



ರೋಣ ವಿಧಾನಸಭಾ ಮತಕ್ಷೇತ್ರದ ಶಾಸಕರು, ಗದಗ ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷರಾದ ಜಿ ಎಸ್ ಪಾಟೀಲರು ತಮ್ಮ ನಿವಾಸದಲ್ಲಿ ತಿಮ್ಮಾಪೂರ ಗ್ರಾಮ ಪಂಚಾಯಿತಿಗೆ 2ನೇ ಅವಧಿಗೆ ಅವಿರೋಧವಾಗಿ ಆಯ್ಕೆಯಾದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಹನುಮವ್ವ ತಳವಾರ ಅವರನ್ನು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಉತ್ತಮ ಆಡಳಿತವನ್ನು ನೀಡುತ್ತಿದ್ದು, ಚುನಾವಣಾ ಪೂರ್ವದಲ್ಲಿ ನೀಡಿದ 5 ಗ್ಯಾರಂಟಿ ಯೋಜನೆಗಳ ಭರವಸೆ ಈಡೇರಿಸಿ, ನುಡಿದಂತೆ ನಡೆದಿದ್ದೇವೆ ಎಂದರು. ಗ್ರಾಮ ಪಂಚಾಯಿತಿಯಲ್ಲಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಿ, ಸಾರ್ವಜನಿಕರಿಗೆ ಉತ್ತಮ ಆಡಳಿತ ನೀಡುವ ಮೂಲಕ ಪ್ರಶಂಸೆಗೆ ಪಾತ್ರರಾಗಬೇಕೆಂದು ನೂತನ ಅಧ್ಯಕ್ಷರಿಗೆ ಕಿವಿಮಾತು ಹೇಳಿದರು.

ಬಿಜೆಪಿಯನ್ನು ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದ ಗ್ರಾಮ ಪಂಚಾಯಿತಿ ಸದಸ್ಯೆ ಲಕ್ಷ್ಮೀ ಮಹೇಶ ಗಾಜಿ ಅವರನ್ನು ಅಧಿಕೃತವಾಗಿ ಪಕ್ಷಕ್ಕೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಗದಗ ಜಿಲ್ಲಾಧ್ಯಕ್ಷ ಯಲ್ಲಪ್ಪ ಎಚ್ ಬಾಬರಿ, ಗ್ರಾ ಪಂ ಸದಸ್ಯರಾದ ಹುಚ್ಚೀರಪ್ಪ ಜೋಗಿನ, ಯಲ್ಲಪ್ಪ ಹಾಗಲದ, ಬಾಳಪ್ಪ ಗಂಗರಾತ್ರಿ, ಶರಣಪ್ಪ ಜೋಗಿನ, ಭೀಮಪ್ಪ ರಾಮಜಿ, ಹನುಮಪ್ಪ ತಳವಾರ, ಗಿರೀಶ ಗುಡ್ಲಾನೂರ, ಬಸವರಾಜ ದೇವರವರ, ರಾಮಣ್ಣ ಖಂಡ್ರಿ, ಮಲ್ಲಪ್ಪ ಕನ್ಯರಿ ಮುಂತಾದವರಿದ್ದರು.

# ನವೀಕೃತ ಕಟ್ಟಡದ ಉದ್ಘಾಟನೆ ಇಂದು

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನ ದೊಡ್ಡೂರು ಕ್ಲಸ್ಟರ್ ಹಳೆಯ ಕಟ್ಟಡವನ್ನು ಎಲ್ಲಾ ಮುಖ್ಯ ಗುರುಗಳ ಸಂಪೂರ್ಣ ಸಹಕಾರದಿಂದ ನವೀಕರಣ ಮಾಡಲಾಗಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಜಿ ಎಂ ಮುಂದಿನಮನಿ ಉಪಸ್ಥಿತಿಯಲ್ಲಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಶಾಸಕರಾದ ಚಂದ್ರು ಲಮಾಣಿಯವರ ನೇತೃತ್ವದಲ್ಲಿ ನವೀಕೃತ ಕಟ್ಟಡದ ಉದ್ಘಾಟನೆ ನಡೆಯಲಿದೆ.

ಇದರೊಂದಿಗೆ ಮುಖ್ಯ ಶಿಕ್ಷಕರಿಗೆ ಒಂದು ದಿನದ ಕಾರ್ಯಾಗಾರ ನಡೆಯಲಿದೆ. ಸಂಘದ ಪದಾಧಿಕಾರಿಗಳು ಹಾಜರಿರಬೇಕೆಂದು ಕ್ಲಸ್ಟರ್ ಸಿಆರ್‌ಪಿ ಜಿ ಎಚ್ ರಾಜೂರ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

## ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸನ್ಮಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಾದ್ಯಂತ ಪೊಲೀಸ್ ಇಲಾಖೆಗೆ ಹಾಗೂ ಸಾರ್ವಜನಿಕರಿಗೆನು ಕೂಲವಾಗುವಂತೆ ಮೋಬಿಫೈ, ಥರ್ಡ್ ಐ, ಸೆಗ್ ವೇನಂತಹ ಹಲವಾರು ವಿನೂತನ ಯೋಜನೆಗಳನ್ನು ಜಾರಿಗೆ ತಂದು, ಇಲಾಖೆಗೆ ಆಧುನಿಕತೆಯ ಸ್ಪರ್ಶ ನೀಡಿದ ದಕ್ಷತೆ, ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಬಿ ಎಸ್ ನೇಮಗೌಡರನ್ನು ಕರ್ನಾಟಕ ಜನಪರ ಅಭಿವೃದ್ಧಿ ವೇದಿಕೆಯ ವತಿಯಿಂದ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ಎಮ್ ಆಯ್ ಮುಳಗುಂದ, ರಾಜ್ಯಾಧ್ಯಕ್ಷ ಸುರೇಶ ಹೆಚ್ ಮೇದಾರ, ರಾಜ್ಯ ಸಂಚಾಲಕ ರಾಜಶೇಖರ ಕಾತರಕಿ, ರಾಜ್ಯ ಅಲ್ಪಸಂಖ್ಯಾತ ಘಟಕದ ಉಪಾಧ್ಯಕ್ಷ ನೂರಲ್ಲಾಖಾನ (ರಾಜು) ಪಠಾಣ್, ಮುಖಂಡರಾದ ವೆಂಕಟೇಶ ಬಳ್ಳಾರಿ, ಆನಂದ ಮುಂಡರಗಿ, ಪರಶುರಾಮ ವಡ್ಡರ, ರುದ್ರಮುನಿ ಹಿರೇಮಠ, ಮಲ್ಲೇಶ ವಡ್ಡರ, ರವಿ ಹಿರೇಮಠ, ಜಗನ್ನಾಥ ಮೇದಾರ, ಬಸವರಾಜ ಬಹದ್ದೂರ್ ಬಂಡಿ, ಮಹಾಂತೇಶ ಮುಂಡರಗಿ, ಮೈಲಾರಪ್ಪ ಕೊಟೆಪ್ಪನವರ, ಪರಶುರಾಮ ಮೇದಾರ, ಮಂಜುನಾಥ ಅಕ್ಕಿ ಮುಂತಾದವರು ಉಪಸ್ಥಿತರಿದ್ದರು.

ಅಗತ್ಯವಿದ್ದಲ್ಲಿ ಸರಕಾರದ ನೆರವು ತಲುಪಿಸಲು ಅಧಿಕಾರಿಗಳಿಗೆ ಸಚಿವ ಲಾಡ್ ಸೂಚನೆ

# ಹಳ್ಳಿಗಳಿಗೆ ಹೋಗಿ ಜನರ ಸಮಸ್ಯೆ ಕೇಳಿ

■ ವಿಜಯಸಾಕ್ಷಿ ಸುದ್ದಿ, ಧಾರವಾಡ



ಜಿಲ್ಲೆಯಲ್ಲಿ ಕೆಲವು ಕಡೆ ಅತಿಯಾದ ಮಳೆ, ಮುಂಗಾರು ಬಿತ್ತನೆ ಇಲ್ಲದೆ ಜನ ತೊಂದರೆಯಲ್ಲಿದ್ದಾರೆ. ಅಧಿಕಾರಿಗಳು ಕಚೇರಿಯಲ್ಲಿ ಕುಳಿತುಕೊಳ್ಳದೇ ಹಳ್ಳಿಗಳಿಗೆ ಹೋಗಿ ಸಾರ್ವಜನಿಕರ ಸಮಸ್ಯೆಗಳನ್ನು ಕೇಳಬೇಕು. ಮತ್ತು ಅವರಿಗೆ ಅಗತ್ಯವಿರುವ ಸರಕಾರದ ನೆರವು, ಸಹಾಯ ಮಾಡಬೇಕೆಂದು ರಾಜ್ಯ ಕಾರ್ಮಿಕ ಸಚಿವ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ಅವರು ಬುಧವಾರ ಸಂಜೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಪ್ರಕೃತಿ ವಿಕೋಪಕ್ಕೆ ಸಂಭಂದಿಸಿದ ವಿಷಯಗಳ ಕುರಿತು ಜಿಲ್ಲಾ ಮಟ್ಟದ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಸಭೆ ಜರುಗಿಸಿ ಮಾತನಾಡಿದರು.

ಅಧಿಕಾರಿಗಳು ಕಚೇರಿಯಲ್ಲಿ ಕಾಲ ಕಳೆಯದೆ, ಜನರ ಬಳಿ ಹೋಗಬೇಕು. ಮನೆ ಹಾನಿ ಪ್ರಕರಣಗಳನ್ನು ಅಧಿಕಾರಿಗಳು ಸ್ವತಃ ಭೇಟಿ ನೀಡಿ, ಪರಿಶೀಲಿಸಬೇಕು. ಜನರ ಸಂಚಾರಕ್ಕೆ, ವಿದ್ಯಾರ್ಥಿಗಳ ಓಡಾಟಕ್ಕೆ ಅಡಚಣೆ ಆಗಿರುವ ರಸ್ತೆಗಳ ದುರಸ್ತಿಗೆ ಆದ್ಯತೆ ನೀಡಬೇಕು ಎಂದು ಸಚಿವರು ಸೂಚಿಸಿದರು.

ಜಿಲ್ಲೆಯಲ್ಲಿ ಮುಂಗಾರು ಮಳೆ ಅಭಾವದಿಂದ ಮುಂಗಾರು ಬಿತ್ತನೆಗೆ ಹಿನ್ನಡೆ ಆಗಿದೆ. ಬಿತ್ತಿದ ಕೆಲವು ರೈತರ ಬೆಳೆ ಸಕಾಲಕ್ಕೆ ಮಳೆ ಇಲ್ಲದೆ ಹಾಗೂ ಈಗ ಅತಿ ಮಳೆಯಿಂದಾಗಿ ಬೆಳೆ ಕುಂಠಿತವಾಗಿದೆ. ಕೃಷಿ ಇಲಾಖೆ ಅಧಿಕಾರಿಗಳು ರೈತ ಸಂಪರ್ಕ ಕೇಂದ್ರಗಳನ್ನು ಸಕ್ರಿಯವಾಗಿ ತೊಡಗಿಸಬೇಕು. ಪ್ರತಿ ರೈತ ಸಂಪರ್ಕ ಕೇಂದ್ರ ವ್ಯಾಪ್ತಿಯ ರೈತರಲ್ಲಿ ಬೆಳೆ ವಿಮೆ ಬಗ್ಗೆ ಜಾಗೃತಿ ಮೂಡಿಸಬೇಕು. ಬಿತ್ತಿದ ಬೆಳೆ ನಿರ್ವಹಣೆ, ಹಿಂಗಾರಿ ಬಿತ್ತನೆಗೆ ಅಗತ್ಯವಿರುವ ಕೃಷಿ ಸಲಹೆ ನೀಡಿ, ರೈತರಿಗೆ ನೆರವಾಗಬೇಕು. ರಾಜ್ಯ ಸರಕಾರದ ಯೋಜನೆ, ಸಬ್ಸಿಡಿಗಳನ್ನು ರೈತರ ಮನೆ ಬಾಗಿಲಿಗೆ ತಲುಪಿಸಬೇಕು ಎಂದು ಸಚಿವ ಸಂತೋಷ ಲಾಡ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಉತ್ತಮವಾಗಿ ಮಳೆ ಆಗಿರುವದರಿಂದ ಬಹುತೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಡಿಮೆ ಆಗಿದೆ. ಜಲ್ ಜೀವನ ಮಿಷನ್ ಮತ್ತು ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಬೇಗ ಪೂರ್ಣಗೊಳಿಸಬೇಕು. ಕಾಮಗಾರಿ ಗುಣಮಟ್ಟ ಕಳಪೆ ಮಾಡಿದರೆ ಸಂಬಂದಿಸಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಸಚಿವರು ಎಚ್ಚರಿಸಿದರು.

ಸರಕಾರದ ಗ್ಯಾರಂಟಿ ಯೋಜನೆಗಳ ಲಾಭ ಜಿಲ್ಲೆಯ ಎಲ್ಲ ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಅಧಿಕಾರಿಗಳು ಕ್ರಮವಹಿಸಬೇಕು. ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಬೇಕು ಎಂದು ಸಚಿವರು ತಿಳಿಸಿದರು.

ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ವ್ಯಾಪ್ತಿ ಹಳ್ಳಿಗಳಿಗೆ, ಜಿಲ್ಲಾ ಮಟ್ಟದ ಅಧಿಕಾರಿಗಳು ತಾಲೂಕು ಮತ್ತು ಬೇರೆ ಬೇರೆ ಹಳ್ಳಿಗಳಿಗೆ ಭೇಟಿ ನೀಡಿ, ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕು. ತಮ್ಮ ಪ್ರವಾಸ ಹಾಗೂ ಗ್ರಾಮ ಭೇಟಿ ವಿವರಗಳನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಪ್ರತಿ ವಾರ ತಪ್ಪದೇ ಸಲ್ಲಿಸಬೇಕು. ಈ ಕುರಿತು ತಾವು ಸ್ವತಃ ಗಮನ ಹರಿಸಿ, ಪರಿಶೀಲಿಸುವದಾಗಿ ಸಚಿವ ಸಂತೋಷ ಲಾಡ್ ಅವರು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಇಲಾಖಾವಾರು ಪ್ರಗತಿ ವರದಿ ಹಾಗೂ ಕೈಗೊಂಡ ಕಾರ್ಯಕ್ರಮಗಳ ಕುರಿತು ವಿವರಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಮಹಾನಗರ ಪೊಲೀಸ್ ಆಯುಕ್ತ ಸಂತೋಷ ಬಾಬು, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲೋಕೇಶ್ ಜಗಲಾಸರ್, ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ., ಮಹಾನಗರ ಪಾಲಿಕೆ ಆಯುಕ್ತ ಡಾ.ಈಶ್ವರ ಉಳ್ಳಾಗಡ್ಡಿ, ಉಪವಿಭಾಗಾಧಿಕಾರಿ ಅಶೋಕ ತೇಲಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಶಿ ಪಾಟೀಲ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಎಸ್.ಕೆಳದಿಮಠ, ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಬಿ.ಎಸ್.ಮೂಗನೂರಮಠ, ಧಾರವಾಡ ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಕಿರಣಕುಮಾರ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಕೆ.ಸಿ.ಬದ್ರಣ್ಣವರ, ಮಹಾನಗರ ಪಾಲಿಕೆ ಅಧೀಕ್ಷಕ ಅಭಿಯಂತರ ತಿಮ್ಮಯ್ಯ, ಪಶು ಸಂಗೋಪನೆ ಇಲಾಖೆ ಉಪ ನಿರ್ದೇಶಕ ಡಾ.ರವಿ ಸಾಲಿಗೌಡರ, ಅಗ್ನಿಶಾಮಕ ಧಾರವಾಡ ಠಾಣಾಧಿಕಾರಿ ಅಮೃತ ಟಿ., ಮತ್ತು ಜಿಲ್ಲೆಯ ಎಲ್ಲ ತಹಸೀಲ್ದಾರರು ಹಾಗೂ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ತೋಟಗಾರಿಕೆ ಇಲಾಖೆಯಿಂದ ಗೋಡಂಬಿ ಬೆಳೆಯಲು ಪ್ರೋತ್ಸಾಹ

■ ವಿಜಯಸಾಕ್ಷಿ ಸುದ್ದಿ, ಗದಗ

ಗೋಡಂಬಿ ಮತ್ತು ಕೋಕೋ ನಿರ್ದೇಶನಾಲಯ ಕೊಚ್ಚಿನ್ ಅವರ ವತಿಯಿಂದ ಶಿರಹಟ್ಟಿ ತಾಲೂಕಿನ ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಶಿರಹಟ್ಟಿ ತಾಲೂಕಿನಲ್ಲಿ ಗೋಡಂಬಿ ಬೆಳೆಯಲು ಪ್ರೋತ್ಸಾಹ ನೀಡಲಾಗುತ್ತಿದೆ.

ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕು, ಗೋಡಂಬಿ ಬೆಳೆಯಲು ಸೂಕ್ತ ಮಣ್ಣು ನೀರು ಹವಾಗುಣವಿದ್ದು, ಆಸಕ್ತ ರೈತರು ಪಹಣಿ ಪತ್ರ, ಬ್ಯಾಂಕ್ ಪಾಸ್ ಪುಸ್ತಕ, ಆಧಾರ ಕಾರ್ಡ್, ಫೋಟೋ ಹಾಗೂ ಮಣ್ಣು ಮತ್ತು ನೀರಿನ ಪರೀಕ್ಷಾ ವರದಿಯೊಂದಿಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಶಿರಹಟ್ಟಿ ಈ ಕಚೇರಿಗೆ ಜುಲೈ 31 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಭೂಮಿಯನ್ನು ಆಳವಾಗಿ ಉಳಮೆ ಮಾಡಿ, ಶಿಫಾರಸ್ಸು ಮಾಡಿದ 7 ಮೀ 7 ಮೀ ಅಂತರದಲ್ಲಿ, ತಗ್ಗು ತೆಗೆದು, ಗೊಬ್ಬರ ಮಿಶ್ರಣ ತುಂಬಿ ಸಸಿಗಳನ್ನು ನಾಟಿ ಮಾಡಬೇಕು. ನಾಟಿ ಮಾಡಿದ ನಂತರ ಊರುಗೋಲು ಕೊಟ್ಟು ಪ್ರತಿ ನಿತ್ಯ ನೀರು ಕೊಡುವುದು.

ಗೋಡಂಬಿ ಒಂದು ಉತ್ತಮ ಭವಿಷ್ಯದ ಬೆಳೆಯಾಗಿದ್ದು, ರೈತರಿಗೆ ಒಂದು ಉತ್ತಮ ಆದಾಯ ನೀಡುವ ಬೆಳೆಯಾಗಿದೆ. ಇದರ ಲಾಭ ಪಡೆಯಬೇಕೆಂದು ಶಿರಹಟ್ಟಿಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ವೀ ಕುಂಬಾರ ಪ್ರಕಟಣೆ ಮೂಲಕ ಕೋರಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka